ಕರ್ನಾಟಕ ಸರ್ಕಾರ

# ಪರಿಸರ ಅಧ್ಯಯನ

## ಅಭ್ಯಾಸಸಹಿತ ಪಠ್ಯಪುಸ್ತಕ

(ಪರಿಷ್ಕೃತ)

ಕನ್ನಡ ಮಾಧ್ಯಮ

2

## ಎರಡನೆಯ ತರಗತಿ

©KTBS
Not to be republished

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು–85.

# ಮುನ್ನುಡಿ

2005ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ಅಧ್ಯಯನ, ಗಣಿತ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯಪುಸ್ತಕಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥ ಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

©KTBS Not to be republished

ಪುಟ್ಟ ಮಕ್ಕಳು ತಮ್ಮ ಶಿಕ್ಷಣದ ಆರಂಭದ ಹಂತದಲ್ಲಿ ಅಂದರೆ 5ನೆಯ ವರ್ಷದಿಂದ 10 ನೆಯ ವಯಸ್ಸಿನವರೆಗೆ ಅವರು ಮುಂದೆ ಜೀವನದಲ್ಲಿ ಕಲಿಯಬೇಕಾದ ಸಕಲ ವಿಷಯಗಳಿಗೆ ಅತ್ಯಾವಶ್ಯಕವಾದ ಮೂಲ ಪರಿಕಲ್ಪನೆಗಳನ್ನು ಹಾಗೂ ಜ್ಞಾನವನ್ನು ಗಳಿಸುತ್ತಾರೆ. ಈ ಪ್ರಕ್ರಿಯೆ ಯೋಜಿತವಾಗಿ ನಡೆದಲ್ಲಿ ಮುಂದೆ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆ ಉತ್ತಮ ರೀತಿಯಲ್ಲಿ ನಡೆಯಲು ಸಹಾಯಕವಾಗುತ್ತದೆ. ಈ ತತ್ವದ ಆಧಾರದ ಮೇಲೆ ಪುಟ್ಟಮಕ್ಕಳಿಗೆ 1ನೇ ತರಗತಿಯಿಂದ 5ನೇ ತರಗತಿಯವರೆಗೆ ಅವರ ಮಾತೃಭಾಷೆ, ರಾಜ್ಯಭಾಷೆ ಹಾಗೂ ಪರಿಚಯ ಭಾಷೆಯಾಗಿ ಇಂಗ್ಲಿಷ್, ಗಣಿತ ಮತ್ತು ಪರಿಸರ ಅಧ್ಯಯನ ಎಂಬ ವಿಷಯಗಳು ಇರುತ್ತವೆ.

ಪರಿಸರ ಅಧ್ಯಯನದಲ್ಲಿ ಮಕ್ಕಳು ದೈನಂದಿನ ಜೀವನಕ್ಕೆ ಸಂಬಂಧಿಸಿದ ವಿಜ್ಞಾನ, ಸಮಾಜ, ಪರಿಸರದ ಪರಿಚಯ, ಕುಟುಂಬ, ದೇಶ, ತಮ್ಮ ಕರ್ತವ್ಯ ಹಾಗೂ ಹಕ್ಕುಗಳು ಇತ್ಯಾದಿ ವಿಷಯಗಳನ್ನು ಚಟುವಟಿಕೆಗಳ ಮೂಲಕ ತಮ್ಮನ್ನು ತೊಡಗಿಸಿಕೊಂಡು ಕಲಿಯುವ ಪ್ರಯತ್ನ ಮಾಡಲು ಅವಕಾಶ ಕೊಡಲಾಗಿದೆ. ಈ ಹಂತದಲ್ಲಿ ಬೋಧನೆಗಿಂತ ಮಕ್ಕಳು ಸ್ವಂತ ಪ್ರಯತ್ನದಿಂದ ಸಹಪಾಠಿಗಳೊಂದಿಗೆ ಬೆರೆತು, ಚರ್ಚಿಸಿ ಅನುಭವಗಳನ್ನು ಹಂಚಿಕೊಂಡು ಕಲಿಯಲು ಅವಕಾಶ ಮಾಡಿಕೊಡಲಾಗಿದೆ. ಈ ಪಠ್ಯಪುಸ್ತಕಗಳು ಸಚಿತ್ರವರ್ಣರಂಜಕವೂ, ಆಕರ್ಷಕವಾಗಿಯೂ ಇರುವಂತೆ ಮಾಡಲು ಶ್ರದ್ಧಾಪೂರ್ವಕ ಪ್ರಯತ್ನ ಮಾಡಲಾಗಿದೆ. ಶಿಕ್ಷಕರ ಪಾತ್ರ ಮಕ್ಕಳಿಗೆ ಕಲಿಯಲು ಪೂರಕವಾದ ಸನ್ನಿವೇಶಗಳನ್ನು ಒದಗಿಸಿಕೊಟ್ಟು ಮಾರ್ಗದರ್ಶನ ಮಾಡುವುದಾಗಿದೆ. ಕಲಿಕೆಯಲ್ಲಿ ಸಂತಸ, ಯಶಸ್ಸು ಹಾಗೂ ತೃಪ್ತಿಯನ್ನು ತರುವುದೇ ಈ ಪಠ್ಯಪುಸ್ತಕಗಳ ಗುರಿ. ಈ ವಿಚಾರದಲ್ಲಿ ಶಿಕ್ಷಕರ ಪಾತ್ರ ಬಹಳ ಮಹತ್ವದ್ದಾಗಿದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿ ವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
**ಮುಖ್ಯ ಸಂಯೋಜಕರು**
**ಪಠ್ಯಕ್ರಮ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ**
**ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು**

**ನಾಗೇಂದ್ರ ಕುಮಾರ್**
**ವ್ಯವಸ್ಥಾಪಕ ನಿರ್ದೇಶಕರು**
**ಕರ್ನಾಟಕ ಪಠ್ಯಪುಸ್ತಕ ಸಂಘ,**
**ಬೆಂಗಳೂರು**

©KTBS Not to be republished

# ಮೊದಲ ಮಾತು

ಇತ್ತೀಚಿನ ಮನುಕುಲದ ಅಭಿವೃದ್ಧಿ, ಸಂಶೋಧನೆ ಮತ್ತು ಮುಂಬರುವ ವರ್ಷಗಳಲ್ಲಿ ಮಾನವರು ಎದುರಿಸಬಹುದಾದ ಅನೇಕ ಹೊಸ ಸವಾಲುಗಳು ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ಎನ್.ಸಿ.ಇ.ಆರ್.ಟಿ. (NCERT) ಸಂಸ್ಥೆಯು ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು (NCF) 2005 ದೇಶದ ಶಾಲಾ ಶಿಕ್ಷಣಕ್ಕೆ ಪಠ್ಯಕ್ರಮ, ಪಠ್ಯಪುಸ್ತಕಗಳು ಮತ್ತು ಬೋಧನಾ ವಿಧಾನಗಳನ್ನು ತಯಾರಿಸಲು ಮಾರ್ಗದರ್ಶಿಯಾಗಿದೆ. ಎನ್.ಸಿ.ಎಫ್ 2005ರ, ಐದು ಮಾರ್ಗದರ್ಶಿ ತತ್ವಗಳನ್ನು ಆಧರಿಸಿ ನಾವು ಕರ್ನಾಟಕ ರಾಜ್ಯದ ತರಗತಿ 1 ಮತ್ತು 2ರ ಪರಿಸರ ಅಧ್ಯಯನ ಪಠ್ಯಪುಸ್ತಕಗಳನ್ನು ರಚಿಸಿದ್ದೇವೆ. ಸಾಮಾನ್ಯ ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳ ಚೌಕಟ್ಟುಗಳನ್ನು ಸೇರಿಸಿ ತನ್ಮೂಲಕ ಈ ವಿಷಯಗಳ ಪರಿಕಲ್ಪನೆಗಳನ್ನು ಸಮನ್ವಯಗೊಳಿಸಲು ಇಲ್ಲಿ ಪ್ರಯತ್ನಿಸಿದ್ದೇವೆ. ಶಾಲಾ ಶಿಕ್ಷಣದ ಪ್ರಾರಂಭದಿಂದಲೇ ಮಕ್ಕಳು ನೈಸರ್ಗಿಕ ಮತ್ತು ಸಾಮಾಜಿಕ ಪರಿಸರಗಳನ್ನು ಸಮಗ್ರ ದೃಷ್ಟಿಕೋನದಿಂದ ನೋಡಬೇಕೆಂಬುದೇ ಇದರ ಉದ್ದೇಶ. ಕುಟುಂಬ ಸಸ್ಯ–ಪ್ರಾಣಿಗಳು, ಆಹಾರ, ಆರೋಗ್ಯ, ಹಬ್ಬಗಳು ಇತ್ಯಾದಿ ಹಲವಾರು ವಿಷಯಗಳನ್ನು ಎನ್.ಸಿ.ಎಫ್ 2005ರ ಚೌಕಟ್ಟನ್ನು ಅನುಸರಿಸಿ ಮಕ್ಕಳ ವಯೋಮಿತಿಗನುಗುಣವಾಗಿ ಸರಳವಾಗಿ ನಿರೂಪಿಸಲು ಪ್ರಯತ್ನಿಸಿದ್ದೇವೆ.

ಈ ಪಠ್ಯಪುಸ್ತಕಗಳನ್ನು ರಚಿಸುವಾಗ ಮಕ್ಕಳು ಸಂಬಂಧಗಳನ್ನು ಕಲ್ಪಿಸಿಕೊಳ್ಳಲು ಅನುಕೂಲವಾಗುವಂತೆ ಹಾಗೂ ತನ್ಮೂಲಕ ಪರಿಕಲ್ಪನೆಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುವಂತೆ, ರಾಜ್ಯದ ಸಾಮಾಜಿಕ, ಆರ್ಥಿಕ, ಪಾರಿಸಾರಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡಿದ್ದೇವೆ. ಒಂದು ಮತ್ತು ಎರಡನೆಯ ತರಗತಿಯ ಮಕ್ಕಳು ಶಿಕ್ಷಣ ವ್ಯವಸ್ಥೆಯ ಪ್ರಾರಂಭಿಕ ಹಂತದಲ್ಲಿರುವುದರಿಂದ, ಚಿತ್ರಗಳನ್ನು ಅತಿ ಹೆಚ್ಚಾಗಿ ಬಳಸಿ, ಪರಿಕಲ್ಪನೆಗಳನ್ನು ತಿಳಿಯಪಡಿಸುವ ಪ್ರಯತ್ನವನ್ನು ಮಾಡಿದ್ದೇವೆ. ಮಕ್ಕಳ ಕಲಿಕಾ ಸಾಮರ್ಥ್ಯಗಳು ಹೆಚ್ಚಲು ಪೂರಕವಾಗುವಂತೆ ಅವರ ವಯೋಮಾನವನ್ನು ಗಮನದಲ್ಲಿರಿಸಿ ವೀಕ್ಷಣೆ, ಬಣ್ಣ ತುಂಬುವುದು ಮುಂತಾದ ವಿವಿಧ ರೀತಿಯ ಸರಳ ಚಟುವಟಿಕೆಗಳನ್ನು ಹಾಗೂ ಅಭ್ಯಾಸಗಳನ್ನು ಕೊಟ್ಟಿದ್ದೇವೆ. ಮಕ್ಕಳಲ್ಲಿ ಆಸಕ್ತಿ ಮೂಡಿಸಿ, ಹೆಚ್ಚು ಮಕ್ಕಳು ಕಲಿಕೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದೇ ಇದರ ಗುರಿ. ಇದು ಮಕ್ಕಳ ವಿಚಾರಣಾ ಸಾಮರ್ಥ್ಯವನ್ನು ಉತ್ತೇಜಿಸಬಹುದಾದ ಸಾಧ್ಯತೆಯೂ ಹೆಚ್ಚು. ಪಠ್ಯಪುಸ್ತಕಗಳು ಮಕ್ಕಳ ಸುತ್ತಲ ಪರಿಸರ, ಸ್ಥಳೀಯ ಜ್ಞಾನ ಮುಂತಾದವುಗಳಿಗೆ ಒತ್ತುಕೊಟ್ಟು, ನೈಸರ್ಗಿಕ ಹಾಗೂ ಸಾಮಾಜಿಕ ಪರಿಸರಗಳ ಸರಳ ಪರಿಕಲ್ಪನೆಗಳನ್ನು ಮಕ್ಕಳಿಗೆ ಪರಿಚಯಿಸುವಂತೆ ನಿಯೋಜಿಸಲಾಗಿದೆ. ಇದರಿಂದ ಮಕ್ಕಳು ತಾವು ಬದುಕುತ್ತಿರುವ ಪರಿಸರ ಮತ್ತು ಅಲ್ಲಿರುವ ಪ್ರತಿಯೊಂದು ಘಟಕಗಳ ಮಹತ್ವವನ್ನರಿತು ಅವುಗಳನ್ನು ಮೆಚ್ಚಲು, ಪ್ರೀತಿಸಲು ಆರಂಭಿಸುತ್ತಾರೆ ಎನ್ನುವ ನಂಬಿಕೆ ನಮಗಿದೆ. ಇವೇ ಪರಿಸರ ಸಂರಕ್ಷಣೆಯ ಮೊದಲ ಮೆಟ್ಟಿಲಲ್ಲವೇ? ಭಾಷೆಯ ಬಳಕೆ ಮತ್ತು ನಿರೂಪಣೆಯಲ್ಲಿ ನಾವು ಲಿಂಗಭೇದವನ್ನು ಆದಷ್ಟು ಕಡಿಮೆ ಮಾಡಲು ಯತ್ನಿಸಿದ್ದೇವೆ. ಶಿಕ್ಷಕ/ಶಿಕ್ಷಕಿಯರಿಗೆ ಅನುಕೂಲವಾಗುವಂತೆ ಆಯಾ ಪಾಠದಿಂದ ಮಕ್ಕಳು ಬೆಳೆಸಿಕೊಳ್ಳಬೇಕಾದ ಸಾಮರ್ಥ್ಯಗಳನ್ನು ಪಾಠದ ಪ್ರಾರಂಭದಲ್ಲಿ ಕೊಟ್ಟಿದ್ದೇವೆ.

ಈ ಪಠ್ಯಪುಸ್ತಕವನ್ನು ಪರಿಷ್ಕರಿಸಿ ಇನ್ನೂ ಉತ್ತಮಗೊಳಿಸಲು ಶಿಕ್ಷಕ / ಶಿಕ್ಷಕಿಯರಿಂದ, ಪೋಷಕರಿಂದ ಮತ್ತು ಸಾಮಾಜಿಕ ಕಳಕಳಿಯುಳ್ಳ ಜನರಿಂದ ಸಲಹೆ, ಸೂಚನೆಗಳನ್ನು ನಾವು ಸದಾ ಸ್ವಾಗತಿಸುತ್ತೇವೆ.

ಪರಿಸರದ ಬಗ್ಗೆ, ಪರಿಸರದಿಂದ, ಪರಿಸರ (ಸಂರಕ್ಷಣೆ)ಕ್ಕಾಗಿ ನೀಡುವ ಶಿಕ್ಷಣವೇ ಪರಿಸರ ಶಿಕ್ಷಣ.

ಡಾ|| ಆರ್. ಶೈಲಜಾ

ಅಧ್ಯಕ್ಷರು ಪಠ್ಯಪುಸ್ತಕ ರಚನಾ ಸಮಿತಿ

© KTBS Not to be republished

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :**

**ಡಾ. ಆರ್. ಶೈಲಜಾ,** ನಿರ್ದೇಶಕರು, ಪ್ರಾದೇಶಿಕ ಪರಿಸರ ಶಿಕ್ಷಣ ಕೇಂದ್ರ, ದಕ್ಷಿಣ ವಲಯ, 143, ಇನ್ಫಂಟ್ರಿ ರಸ್ತೆ, ಬೆಂಗಳೂರು.

**ಸದಸ್ಯರು :**

**ಶ್ರೀ ಸುಜಯ್ ಸಂದೀಪ್,** ಸಹಶಿಕ್ಷಕರು, ಸ.ಹಿ.ಪ್ರಾ. ಶಾಲೆ, ನವರತ್ನ ಅಗ್ರಹಾರ, ಬೆಂಗಳೂರು ಉತ್ತರವಲಯ ಬೆಂಗಳೂರು ಉತ್ತರ ಜಿಲ್ಲೆ.

**ಶ್ರೀ ಆನಂದ ಅಜಿಲ,** ಮುಖ್ಯ ಶಿಕ್ಷಕರು, ಸ.ಹಿ.ಪ್ರಾ. ಶಾಲೆ, ನೆಲ್ಯಾಡಿ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

**ಶ್ರೀ ಡಿ. ಹೆಚ್. ಲಕ್ಷ್ಮಣಯ್ಯ,** ಸ.ಶಿ., ಸ.ಹಿ.ಪ್ರಾ.ಶಾಲೆ, ನಿಟ್ಟೂರು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀ ಕೆ. ಎಲ್, ಶಾನಭಾಗ,** ಸಹಶಿಕ್ಷಕರು, ಸ.ಹಿ.ಪ್ರಾ.ಶಾಲೆ, ಕೊಡ್ಲೂಳ, ಭಟ್ಕಳ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

**ಶ್ರೀ ಸುಣಗಾರ ರಾಘವೇಂದ್ರ,** ಸ.ಶಿ., ಸ.ಹಿ.ಪ್ರಾ.ಶಾಲೆ, ನಾಗನೂರ, ಜಮಖಂಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ

**ಚಿತ್ರಕಲಾವಿದರು :**

**ಶ್ರೀ ತಾರಕೇಶ್,** ಚಿತ್ರಕಲಾ ಶಿಕ್ಷಕರು, ಸರಕಾರಿ ಪ್ರೌಢಶಾಲೆ, ಬನ್ನಿತಾಳಾಪುರ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ

**ಶ್ರೀ ಜಯರಾಂ,** ಚಿತ್ರಕಲಾ ಶಿಕ್ಷಕರು, ವಿ.ವಿ.ಎಸ್. ಪ್ರೌಢಶಾಲೆ, ರಾಜಾಜಿನಗರ, ಬೆಂಗಳೂರು.

**ಪರಿಶೀಲಕರು :**

**ಶ್ರೀ ಡಿ. ಆರ್. ಪ್ರಸನ್ನ ಕುಮಾರ್,** ಪಾಲಿಸಿ ಪ್ಲಾನಿಂಗ್ ಘಟಕ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

**ಮುಖ್ಯ ಸಂಯೋಜಕರು :**

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಶ್ರೀಮತಿ ಸಿ.ನಾಗಮಣಿ,** ಉಪ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ ಎಸ್.ಎನ್. ಲೀಲಾವತಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

©KTBS Not to be republished

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ 2014–15 ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ 27 ಸಮಿತಿಗಳನ್ನು ರಚಿಸಿ ದಿನಾಂಕ: 24.11.2014 ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು 24.11.2014ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ 19.09.2015 ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು 2016–17 ರ ಬದಲು 2017–18ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿ ದೋಷ, ಆಶಯ ದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳುಹಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು **ಡಯಟ್** ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ–ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದ ಕಡೆ ಪರಿಷ್ಕರಿಸಲಾಗಿದೆ.

©KTBS Not to be republished

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯ ಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ 27 ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**ನರಸಿಂಹಯ್ಯ**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–85

**ಪ್ರೊ. ಬರಗೂರು ರಾಮಚಂದ್ರಪ್ಪ**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–85

© KTBS Not to be republished

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ,** ರಾಜ್ಯಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಡಾ. ಎಸ್. ಶಿಶುಪಾಲ,** ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.

**ಸದಸ್ಯರು :**

**ಶ್ರೀಮತಿ ಕೆ. ಮಮತ,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಕೆಂಗೇರಿ ಉಪನಗರ, ಬೆಂಗಳೂರು.

**ಶ್ರೀ ಕೆ.ಎಸ್. ಗಿರೀಶ್,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಜಾಲಿಗೆ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ಶ್ರೀಮತಿ ಜಿ. ರೇಣುಕಾ,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಹೊನ್ನಶೆಟ್ಟಿಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.

**ಶ್ರೀಮತಿ ಆರ್.ಎನ್. ವಸಂತ ಸುಜಯ್,** ಸ.ಶಿ, ಸರ್ಕಾರಿ ಪ್ರೌಢಶಾಲೆ, ಹೆಬ್ಬಾಳ, ಬೆಂಗಳೂರು.

**ಶ್ರೀಮತಿ ಎ. ಲಕ್ಷ್ಮೀದೇವಿ,** ಸ.ಶಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾವೇರಿಪುರ, ಬೆಂಗಳೂರು.

**ಶ್ರೀಮತಿ ಬಿ. ಹೇಮಲತ,** ಸ.ಶಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೆ.ನಾರಾಯಣಪುರ, ಬೆಂಗಳೂರು.

**ಕಲಾವಿದರು :**

**ಶ್ರೀ ಯು. ಹಜರತ್ ಅಲಿ,** ಅಧ್ಯಾಪಕರು, ಲಲಿತಕಲಾ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು.

## ಉನ್ನತ ಪರಿಶೀಲನ ಸಮಿತಿ

**ಡಾ. ಟಿ.ಆರ್. ಅನಂತರಾಮು,** ಹಿರಿಯ ವಿಜ್ಞಾನಿ (ನಿವೃತ್ತ), ಭಾರತೀಯ ಭೂ ವೈಜ್ಞಾನಿಕ ಸರ್ವೇ ಸಂಸ್ಥೆ, ಬೆಂಗಳೂರು.

**ಪ್ರೊ. ವಿ.ಎಸ್. ವತ್ಸಲ,** ಪ್ರಾಂಶುಪಾಲರು (ನಿವೃತ್ತ), ಎಮ್.ಇ.ಎಸ್ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

**ಡಾ. ಜಿ.ಎಮ್. ನಿಜಗುಣ,** ಪ್ರಾಂಶುಪಾಲರು (ನಿವೃತ್ತ), ವಿಜಯ ಕಾಲೇಜು, ಬಸವನಗುಡಿ, ಬೆಂಗಳೂರು.

**ಪ್ರೊ. ಕೆ.ಎಸ್. ನಟರಾಜ್,** ಭೌತವಿಜ್ಞಾನ ಪ್ರಾಧ್ಯಾಪಕರು (ನಿವೃತ್ತ), ನ್ಯಾಷನಲ್ ಕಾಲೇಜು, ಜಯನಗರ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ ನರಸಿಂಹಯ್ಯ,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀಮತಿ ಎನ್.ಆರ್. ಶೈಲಜಕುಮಾರಿ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

©KTBS Not to be republished

# ಪರಿವಿಡಿ


| ಕ್ರ.ಸಂ. | ಪಾಠ | ಪುಟ ಸಂಖ್ಯೆ |
|---|---|---|
| 1. | ಪ್ರಾಣಿ ಪರಿಚಯ | 1 – 11 |
| 2. | ಪ್ರಾಣಿ ಪಾಲನೆ | 12 – 24 |
| 3. | ಹಿತ್ತಲ ಗಿಡ | 25 – 34 |
| 4. | ನಾವಿರುವುದು ನಿಮಗಾಗಿ | 35 – 43 |
| 5. | ಅಮೂಲ್ಯ ನೀರು | 44 – 52 |
| 6. | ಬಗೆ ಬಗೆಯ ಆಹಾರ | 53 – 66 |
| 7. | ಮನೆ ಬೇಕು ಮನೆ | 67 – 76 |
| 8. | ಅಂಗ – ಆರೋಗ್ಯ | 77 – 86 |
| 9. | ನನ್ನ ಸುರಕ್ಷತೆ | 87 – 91 |
| 10. | ನಮ್ಮೆಲ್ಲರ ಆಸ್ತಿ | 92 – 98 |
| 11. | ಪಯಣ | 99 – 107 |
| 12. | ನನ್ನ ಕುಟುಂಬ | 108 – 114 |
| 13. | ಹಬ್ಬ ಬಂತು ಹಬ್ಬ | 115 – 122 |
| 14. | ಹಿರಿಯರ ಆರೈಕೆ | 123 – 125 |
| 15. | ಸಹಾಯ – ಸಹಕಾರ | 126 – 130 |
| 16. | ಆಡಿ ನಲಿ | 131 – 138 |
| 17. | ನಮಗೆ ಇವೂ ಬೇಕು | 139 – 143 |
| 18. | ಬಾನಂಗಳದಲ್ಲಿ | 144 – 152 |
| 19. | ಚಂದದೂರು ನನ್ನೂರು | 153 – 159 |


©KTBS Not to be republished

ಪಾಠ – 1

# ಪ್ರಾಣಿ ಪರಿಚಯ

ಈ ಪಾಠವನ್ನು ಕಲಿತ ನಂತರ ನೀನು,


- ಸ್ಥಳೀಯ ಪ್ರಾಣಿಗಳನ್ನು (ಪಕ್ಷಿಗಳೂ ಸೇರಿದಂತೆ) ಗುರುತಿಸುವೆ.


**ಇವುಗಳನ್ನು ಗುರುತಿಸಿ, ಚೌಕದಲ್ಲಿ ಹೆಸರು ಬರೆ.**














ನಿನ್ನ ಊರಿನಲ್ಲಿ ಕಂಡುಬರುವ ಇತರ ಪ್ರಾಣಿ, ಪಕ್ಷಿಗಳ ಹೆಸರು ಹೇಳು.

©KTBS Not to be republished

**ನೀನು ನೋಡಿದ ಕೆಲವು ಹಕ್ಕಿಗಳ ಹೆಸರನ್ನು ಇಲ್ಲಿ ಬರೆ.**

______________________________

______________________________

______________________________

______________________________

______________________________

ನಿನಗೆ ಇಷ್ಟವಾದ ಹಕ್ಕಿ ಯಾವುದು? ಏಕೆ? ಹೇಳು.

ನಿನ್ನ ಸುತ್ತಲೂ ಕಂಡು ಬರುವ ಹಕ್ಕಿಗಳನ್ನು ಗಮನಿಸು. ಅವುಗಳ ಬಣ್ಣವನ್ನು ಗುರುತಿಸು. ಹಕ್ಕಿಗಳ ದೇಹದ ಲಕ್ಷಣಗಳನ್ನು ನೋಡು.

**ಕೊಕ್ಕು ಮತ್ತು ರೆಕ್ಕೆಗಳಿರುವ ಪ್ರಾಣಿಗಳೇ ಪಕ್ಷಿಗಳು ಅಥವಾ ಹಕ್ಕಿಗಳು**



ಹಕ್ಕಿಗಳಿಗೆ ಕಾಳನ್ನು ಹಾಕು. ಆಗಾಗ ಒಂದು ಸಣ್ಣ ತಟ್ಟೆಯಲ್ಲಿ ನೀರನ್ನು ಇಡು.

ದಿನದ ಯಾವ ಸಮಯದಲ್ಲಿ ಹಕ್ಕಿಗಳು ಹೆಚ್ಚಾಗಿ ಕಂಡು ಬರುತ್ತವೆ? ಗಮನಿಸು.

ಇರುವೆಯನ್ನು ನೋಡಿರುವೆಯಲ್ಲವೆ?

ಇರುವೆಯನ್ನು ಹೋಲುವ 3 ಪ್ರಾಣಿಗಳ ಹೆಸರು ಬರೆ.


1. ______________________________


2. ______________________________


3. ______________________________

© KTBS Not to be republished

ಈ ಚಿತ್ರಗಳಲ್ಲಿರುವ ಪ್ರಾಣಿಗಳ ಹೆಸರನ್ನು ಬರೆ.




1. ____________________

2. ____________________

3. ____________________

ಈ ಪ್ರಾಣಿಗಳ ದೇಹ ಚಿಕ್ಕದು. ಇವಕ್ಕೆ 6 ಕಾಲುಗಳಿವೆ. ಒಂದು ಜೊತೆ 'ಕುಡಿ ಮೀಸೆ'ಗಳೂ ಇವೆ. ಇರುವೆ, ಸೊಳ್ಳೆ, ಜಿರಲೆಗಳ ಕಾಲುಗಳು, ಮೀಸೆಗಳನ್ನು ನೋಡಿದ್ದೀಯಲ್ಲವೆ? ಇವು ಕೀಟಗಳು.

ನೀನು ನೋಡಿರುವ ಕೆಲವು ಕೀಟಗಳ ಹೆಸರುಗಳನ್ನು ಇಲ್ಲಿ ಬರೆ.

____________________ ____________________

____________________ ____________________


____________________ ____________________

____________________ ____________________


____________________ ____________________

©KTBS Not to be republished


ಈ ಚಿತ್ರಗಳಲ್ಲಿ ಕೊಟ್ಟಿರುವ ಕೀಟಗಳನ್ನು ಗುರುತಿಸು. ಚಿತ್ರಗಳನ್ನು ಅವುಗಳ ಹೆಸರುಗಳಿಗೆ ಗೆರೆ ಎಳೆದು ಹೊಂದಿಸು.



ಜೇನುನೊಣ




ಮಿಡತೆ




ಸೊಳ್ಳೆ



ಇರುವೆ



ಜಿರಲೆ




ತಿಗಣೆ

©KTBS Not to be republished


## ಚಿತ್ರ ಬಿಡಿಸು.

ಒಂದು ಹಾಳೆಯಲ್ಲಿ ಅಥವಾ ನೋಟ್ ಪುಸ್ತಕದಲ್ಲಿ ಕುಂಕುಮ/ಅರಿಶಿನ/ನೀಲಿ ಬಣ್ಣ ಬಳಸಿ ಹೆಬ್ಬೆರಳಿನ ಗುರುತು ಮೂಡಿಸು. ಆನಂತರ ಆ ಗುರುತಿನಿಂದ ನಿನಗಿಷ್ಟವಾದ ಪ್ರಾಣಿಯ ಚಿತ್ರ ಬರೆ. ಆನಂತರ ಕೈಗಳನ್ನು ಚೆನ್ನಾಗಿ ತೊಳೆದುಕೊ.


**ಚಟುವಟಿಕೆ ಮಾದರಿ**





ಇಲ್ಲಿ ಹೆಬ್ಬೆರಳಿನ ಗುರುತಿನಿಂದ ಕೆಲವು ಪ್ರಾಣಿಗಳನ್ನು ಚಿತ್ರಿಸಲಾಗಿದೆ. ಇವು ಹೇಗೆ ಚಲಿಸುತ್ತವೆ? ಹೇಳು.



©KTBS Not to be republished



ವಿವಿಧ ಬಣ್ಣಗಳನ್ನು ತೆಗೆದುಕೊ. ಆ ಬಣ್ಣಗಳಲ್ಲಿ ನಿನ್ನ ಹೆಬ್ಬೆರಳನ್ನು ಅದ್ದಿ, ಹಾಳೆಯ ಮೇಲೆ ಹೆಬ್ಬೆರಳಿನ ಗುರುತು ಮೂಡಿಸು. ಈ ಹೆಬ್ಬೆರಳಿನ ಚಿತ್ರದಿಂದ ಮೇಲೆ ಕಾಣಿಸಿದ ಚಿತ್ರಗಳನ್ನು ಬಿಡಿಸು. ಚಿತ್ರಗಳನ್ನು ಬಿಡಿಸಿದ ನಂತರ ನಿನ್ನ ಕೈ ಬೆರಳುಗಳನ್ನು ಚೆನ್ನಾಗಿ ತೊಳೆದುಕೊ.



ಇದು ಹಾವು. ಇದು ತೆವಳುವ ಪ್ರಾಣಿ

©KTBS Not to be republished


ನೀನು ತೆವಳುವ ಪ್ರಾಣಿಗಳನ್ನು ನೋಡಿದ್ದೀಯಾ? ಅಂತಹ ಎರಡು ಪ್ರಾಣಿಗಳ ಹೆಸರು ಹೇಳು.

ಇವು ತೆವಳುವ ಪ್ರಾಣಿಗಳು. ಇವುಗಳ ಹೆಸರನ್ನು ಚೌಕದಲ್ಲಿ ಬರೆ.










**ಈ ಚಿತ್ರದಲ್ಲಿರುವ ಪ್ರಾಣಿಗಳು ಹೇಗೆ ಚಲಿಸುತ್ತವೆ? ಚಿತ್ರ ನೋಡಿ, ಹೊಂದಿಸು.**

| | |
|---|---|
|  | ತೆವಳುವುದು |
|  | ನಡೆಯುವುದು |
|  | ಈಜುವುದು |
|  | ಹಾರುವುದು |
|  | ಕುಪ್ಪಳಿಸುವುದು |

©KTBS Not to be republished

ಚಿತ್ರ ನೋಡಿ, ಗುಂಪಿಗೆ ಸೇರದ ಚಿತ್ರದ ಸುತ್ತ ವೃತ್ತ ಹಾಕು.

| | | | | |
|---|---|---|---|---|
| 1) |  |  |  |  |
| 2) |  |  |  |  |
| 3) |  |  |  |  |
| 4) |  |  |  |  |


©KTBS
Not to be republished

ನೀನು ನೋಡಿರುವ ಪ್ರಾಣಿಗಳ ಹೆಸರುಗಳನ್ನು ಬರೆ.

| | | |
|---|---|---|
| ಹಾರುವ ಪ್ರಾಣಿಗಳು | 1. ________ | 2. ________ |
| ತೆವಳುವ ಪ್ರಾಣಿಗಳು | 1. ________ | 2. ________ |
| ನಡೆದಾಡುವ ಪ್ರಾಣಿಗಳು | 1. ________ | 2. ________ |
| ಕೀಟಗಳು | 1. ________ | 2. ________ |

**ಪಕ್ಷಿಗಳು ಮತ್ತು ಕೀಟಗಳು ಪ್ರಾಣಿಗಳೇ ಆಗಿವೆ. ಅದರಂತೆ ಮಾನವರೂ ಕೂಡ ಪ್ರಾಣಿಗಳ ಗುಂಪಿಗೆ ಸೇರುತ್ತಾರೆ.**

**ಕೆಳಗೆ ಕೊಟ್ಟಿರುವ ಚಿತ್ರಗಳನ್ನು ನೋಡು. ಹೊರಗಿನ ಚೌಕದಲ್ಲಿ ಪ್ರಾಣಿಗಳು ಹಾಗೂ ಒಳಗಿನ ಚೌಕದಲ್ಲಿ ಅವುಗಳ ನೆರಳಿನ ಚಿತ್ರಗಳಿವೆ. ಪ್ರಾಣಿಗಳನ್ನು ಮತ್ತು ಅವುಗಳ ನೆರಳನ್ನು ಹೊಂದಿಸು.**



Not to be republished ©KTBS


**ಕೆಳಗಿನ ಚಿತ್ರಗಳಲ್ಲಿರುವ ಪ್ರಾಣಿಗಳ ಹೆಸರನ್ನು ಚೌಕದಲ್ಲಿ ಬರೆ.**


**ಚಿತ್ರಗಳಿಗೆ ಬಣ್ಣ ಹಾಕು.**

ಕಂದು ಬಣ್ಣವನ್ನು ನಡೆದಾಡುವ ಪ್ರಾಣಿಗಳಿಗೆ, ಹಳದಿ ಬಣ್ಣವನ್ನು ಹಕ್ಕಿಗಳಿಗೆ, ನೀಲಿ ಬಣ್ಣವನ್ನು ತೆವಳುವ ಪ್ರಾಣಿಗಳಿಗೆ, ಕೆಂಪು ಬಣ್ಣವನ್ನು ಕೀಟಗಳಿಗೆ ಹಾಕು.












©KTBS Not to be republished









©KTBS
Not to be republished

ಪಾಠ – 2


# ಪ್ರಾಣಿ ಪಾಲನೆ

**ಈ ಪಾಠವನ್ನು ಕಲಿತ ನಂತರ ನೀನು,**

- ಸಾಕು ಪ್ರಾಣಿಗಳು, ಸಾಕದೇ ಇರುವ ಪ್ರಾಣಿಗಳನ್ನು ವರ್ಗೀಕರಿಸುವೆ.
- ಸಾಕು ಪ್ರಾಣಿಗಳ ಪಾಲನೆ ಮತ್ತು ಪೋಷಣೆಯ ಅಭ್ಯಾಸಗಳನ್ನು ಬೆಳೆಸಿಕೊಳ್ಳುವೆ.




**ಪ್ರಾಣಿಗಳೆಲ್ಲವೂ ಒಟ್ಟಾಗಿ ಸಭೆ ನಡೆಸುತ್ತಿವೆ.**





© KTBS Not to be republished




©KTBS
Not to be republished










©KTBS Not to be republished




ಈ ಕಥೆಯಲ್ಲಿ ಬರುವ ಪ್ರಾಣಿಗಳಲ್ಲಿ ಸಾಕುಪ್ರಾಣಿ ಮತ್ತು ಕಾಡುಪ್ರಾಣಿಗಳು ಯಾವುವು? ಇಲ್ಲಿ ಬರೆ.

| ಸಾಕುಪ್ರಾಣಿಗಳು | ಕಾಡುಪ್ರಾಣಿಗಳು |
|---|---|
| | |

ಇಲ್ಲಿ ಕೊಟ್ಟಿರುವ ಪ್ರಾಣಿಗಳನ್ನು ಗಮನಿಸು. ಅವುಗಳ ಹೆಸರನ್ನು ಚೌಕದಲ್ಲಿ ಬರೆ.

| | | |
|---|---|---|
|  |  |  |
|  |  |  |

©KTBS Not to be republished

| | | |
|---|---|---|
|  |  |  |
|  |  |  |

ಮೇಲಿನ ಚಿತ್ರದಲ್ಲಿರುವ ಯಾವ ಪ್ರಾಣಿಗಳನ್ನು ನಿನ್ನ ಮನೆಯಲ್ಲಿ ಸಾಕಿದ್ದೀಯಾ? ಇಲ್ಲಿ ಬರೆ.

ನಾವು ಮನೆಗಳಲ್ಲಿ ಸಾಕುವ ಪ್ರಾಣಿಗಳೇ ಸಾಕುಪ್ರಾಣಿಗಳು.

ನೀನು ಸಾಕದೇ ಇರುವ ಬೇರೆ ಯಾವ ಪ್ರಾಣಿಗಳು ನಿಮ್ಮ ಮನೆಯಲ್ಲಿವೆ? ಬರೆ.

ಕೆಲವು ಪ್ರಾಣಿಗಳನ್ನು ನಾವು ಸಾಕುವುದಿಲ್ಲ. ಆದರೂ ಅವು ನಮ್ಮ ಮನೆಯಲ್ಲಿರುತ್ತವೆ.

©KTBS Not to be republished

## ಹಾಡಿ ನಲಿ

### ನಾನು ಯಾರು? ನೀನು ಹೇಳು.


ಕಪ್ಪು ಮೈ, ಉದ್ದ ಬಾಲ
ಅಗೆದು ಬಿಲವ ಕೊರೆಯುವೆ
ಮಿಂಚಿನಂತೆ ಓಡಿಯಾಡಿ
ಬೆಕ್ಕ ಬೆಸ್ತುಗೊಳಿಸುವೆ
ನಾನು ಯಾರು? ________________

ಉದ್ದ ದೇಹ, ಉದ್ದ ಬಾಲ
ಗೋಡೆಗಂಟಿ ಚಲಿಸುವೆ
ಹುಳುಗಳನ್ನು ತಿಂದು ನಿನ್ನ
ಮನೆಯ ಸ್ವಚ್ಛಗೊಳಿಸುವೆ
ನಾನು ಯಾರು? ________________

ಉದ್ದ ಮೀಸೆ ಆಡಿಸುತ್ತ
ಓಡುವೆ ನಾ ಮನೆಯ ಸುತ್ತ,
ಸಂದಿ, ಗೊಂದಿಯಲ್ಲಿ ಸೇರಿ
ಓಡುವೆ ಕಣ್ ತಪ್ಪಿಸುತ್ತ
ನಾನು ಯಾರು ? ________________

ಹೆಣೆಯುವೆ ನಾ ಬಲೆಯನು
ಬೀಳಿಸುವೆ ಹುಳುಗಳನು
ಮನೆಯ ಮೂಲೆ ಮೂಲೆಯಲ್ಲಿ
ನೋಡಿ ನನ್ನ ರಾಜ್ಯವನು
ನಾನು ಯಾರು ? ________________

©KTBS Not to be republished



© KTBS Not to be republished


**ಮೇಲಿನ ಚಿತ್ರ ನೋಡು. ಸಾಕುವ ಪ್ರಾಣಿಗಳನ್ನು ಹಳ್ಳಿಯ ಚಿತ್ರಕ್ಕೂ, ಕಾಡಿನ ಪ್ರಾಣಿಗಳನ್ನು ಕಾಡಿನ ಚಿತ್ರಕ್ಕೂ ಗೆರೆ ಎಳೆದು ಹೊಂದಿಸು.**

ಮೇಲಿನ ಚಿತ್ರದಲ್ಲಿರುವ ಯಾವ ಪ್ರಾಣಿಗಳು ಕಾಡಿನಲ್ಲಿ ಇರುತ್ತವೆ? ಹೇಳು.

**ಕಾಡಿನಲ್ಲಿ ವಾಸಿಸುವ ಪ್ರಾಣಿಗಳೇ ಕಾಡುಪ್ರಾಣಿಗಳು**

## ಶಿಕ್ಷಕರ ಸಹಾಯದೊಂದಿಗೆ ಚಿತ್ರ ಮೂಡಿಸು.

ಚಿತ್ರಗಳನ್ನು ಗಮನಿಸು. ಕೈ ಬೆರಳುಗಳನ್ನು ಉಪಯೋಗಿಸಿ, ಈ ಚಿತ್ರಗಳನ್ನು ಗೋಡೆಯ ಮೇಲೆ ಮೂಡಿಸು. ನೆರಳಿನ ಚಿತ್ರದಲ್ಲಿ ಕಂಡು ಬರುವ ಪ್ರಾಣಿಯ ಹೆಸರನ್ನು ಹೇಳು.



©KTBS
Not to be republished

ಇಂತಹ ಕೆಲವು ನೆರಳು ಚಿತ್ರಗಳನ್ನು ಗೋಡೆಯ ಮೇಲೆ ಮೂಡಿಸು. ನಿನ್ನ ಗೆಳೆಯರಿಗೆ ಅವು ಯಾವ ಪ್ರಾಣಿಗಳು ಎಂದು ಗುರುತಿಸಲು ತಿಳಿಸು.


**ಚಿತ್ರ ಸಂಗ್ರಹಿಸು.**

ನಿನಗೆ ಸಿಗುವ ಯಾವುದಾದರೂ ನಾಲ್ಕು ಪ್ರಾಣಿಗಳ ಚಿತ್ರ ಸಂಗ್ರಹಿಸು. ಕೆಳಗೆ ನೀಡಿರುವ ಜಾಗದಲ್ಲಿ ಅಂಟಿಸಿ, ಪ್ರಾಣಿಯ ಹೆಸರು ಬರೆ.

| | |
|---|---|
| ________________ | ________________ |
| ________________ | ________________ |

ನಿನ್ನ ಮನೆಯಲ್ಲಾಗಲೀ ಅಥವಾ ನಿನ್ನ ಸ್ನೇಹಿತರ ಮನೆಗಳಲ್ಲಾಗಲಿ ಪ್ರಾಣಿಗಳನ್ನು ಸಾಕಿದ್ದರೆ, ಏಕೆ ಸಾಕಿದ್ದಾರೆ ಎಂಬುದನ್ನು ತಿಳಿದುಕೊ.

©KTBS Not to be republished




©KTBS Not to be republished

**ಚಿತ್ರ ನೋಡು. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳು.**

- ಹಸು, ಎಮ್ಮೆಗಳನ್ನು ಏಕೆ ಸಾಕುತ್ತಾರೆ?
- ನಾಯಿಯನ್ನು ಏಕೆ ಸಾಕುತ್ತಾರೆ?
- ಕುರಿಯನ್ನು ಸಾಕುವುದರಿಂದ ಯಾವ ಯಾವ ಉಪಯೋಗಗಳಿವೆ?
- ಕೋಳಿಯಿಂದ ಏನು ದೊರೆಯುತ್ತದೆ?



ಕಮಲಳಿಗೆ ಮೊಲವೆಂದರೆ ಬಹಳ ಇಷ್ಟ. ಅವಳ ತಾಯಿ ಅವಳಿಗೆ ಒಂದು ಮೊಲವನ್ನು ಸಾಕಲು ಕೊಟ್ಟಿದ್ದಾಳೆ. ಕಮಲ ಅದಕ್ಕೆ ದಿನ ನಿತ್ಯವೂ ಹುಲ್ಲು ತಿನ್ನಿಸಿ ಮುದ್ದು ಮಾಡುತ್ತಾಳೆ.



ಸಲೀಮನಿಗೆ ಒಂದು ಪಾರಿವಾಳದ ಮರಿ ಸಿಕ್ಕಿದೆ. ಅವನು ಅದನ್ನು ಬಹಳ ಜಾಗರೂಕತೆಯಿಂದ ಸಾಕುತ್ತಿದ್ದಾನೆ. ಕಾಳು, ನೀರು ಕೊಟ್ಟು ಆರೈಕೆ ಮಾಡುತ್ತಾನೆ.



ಪಿಂಟು, ಲಾರಾಳ ಮುದ್ದಿನ ಬೆಕ್ಕು. ಅದಕ್ಕೆ ಅವಳು ಪ್ರತಿದಿನ ಹಾಲು ಹಾಕುತ್ತಾಳೆ. ಲಾರಾ ಶಾಲೆಯಿಂದ ಬಂದ ಕೂಡಲೇ ಪಿಂಟು ಅವಳ ಕಾಲಬಳಿ ಸುತ್ತುತ್ತಿರುತ್ತದೆ.

- ಕಮಲ, ಸಲೀಮ, ಲಾರಾ ಈ ಪ್ರಾಣಿಗಳನ್ನೇಕೆ ಸಾಕಿದ್ದಾರೆ?
- ಅವುಗಳಿಂದ ಆಗುವ ಉಪಯೋಗಗಳೇನು?

**ಪ್ರಾಣಿಗಳನ್ನು ಉಪಯೋಗಕ್ಕಾಗಿ ಸಾಕುವುದಲ್ಲದೇ ಪ್ರೀತಿಗಾಗಿ, ಸಂತೋಷಕ್ಕಾಗಿ ಮತ್ತು ಮುದ್ದು ಮಾಡಲು ಸಾಕುತ್ತಾರೆ.**

**ಈ ಚಿತ್ರಗಳನ್ನು ನೋಡು, ನಿನಗೆ ಸರಿ ಎನಿಸುವ ಚಿತ್ರಗಳಿಗೆ ಚೌಕದಲ್ಲಿ (✓) ಗುರುತು ಹಾಕು. ತಪ್ಪು ಎನಿಸುವ ಚಿತ್ರಗಳಿಗೆ (X) ಗುರುತು ಹಾಕು.**













©KTBS Not to be republished

**ಈ ಚಿತ್ರಗಳನ್ನು ನೋಡಿ, ಪ್ರಶ್ನೆಗಳಿಗೆ ಉತ್ತರಿಸು.**

| | |
|---|---|
|  | ನಿನ್ನ ಮನೆಯಲ್ಲಿ ಸಾಕುವ ಪ್ರಾಣಿಗಳನ್ನು ಹೇಗೆ ಸ್ವಚ್ಛಗೊಳಿಸುವೆ? |
|  | ನಿನ್ನ ಮನೆಯಲ್ಲಿ ಸಾಕಿರುವ ಪ್ರಾಣಿಗಳಿಗೆ ಕಾಯಿಲೆಗಳು ಬಂದರೆ ಏನು ಮಾಡುತ್ತಾರೆ? |
|  | ನಿನ್ನ ಮನೆಯಲ್ಲಿ ಸಾಕಿರುವ ಪ್ರಾಣಿಗಳಿಗೆ ಯಾವ ಯಾವ ಆಹಾರ ನೀಡುತ್ತಾರೆ? |

**ನಾವು ಪ್ರಾಣಿಗಳನ್ನು ಪ್ರೀತಿಯಿಂದ ನೋಡಿಕೊಳ್ಳಬೇಕು. ಏಕೆ?**

© KTBS Not to be republished

ಪಾಠ – 3

# ಹಿತ್ತಲ ಗಿಡ

**ಈ ಪಾಠವನ್ನು ಕಲಿತ ನಂತರ ನೀನು,**

- ಸ್ಥಳೀಯ ಮರಗಿಡಗಳನ್ನು ಗುರುತಿಸುವೆ.
- ಸಸ್ಯದ ಮುಖ್ಯ ಭಾಗಗಳನ್ನು ಹೆಸರಿಸುವೆ.
- ಸಸ್ಯಗಳ ಎತ್ತರ, ಎಲೆಗಳ ಆಕಾರ, ಹೂ, ಬಣ್ಣ ಮುಂತಾದವುಗಳನ್ನು ಹೋಲಿಸುವೆ.

**ಇವುಗಳನ್ನು ನೀನು ನೋಡಿರುವೆಯಾ? ಗುರುತಿಸಿ, ಹೆಸರು ಬರೆ.**














**ನಿನಗೆ ಗೊತ್ತಿರುವ ಇತರ ಗಿಡಮರಗಳ ಹೆಸರನ್ನು ಹೇಳು.**

© KTBS Not to be republished

ಈ ಸಸ್ಯದ ಚಿತ್ರದಲ್ಲಿ ಗೆರೆ ಎಳೆದು ತೋರಿಸಿರುವ ಭಾಗಗಳನ್ನು ಗುರುತಿಸು. (ಶಿಕ್ಷಕರ/ಹಿರಿಯರ ಸಹಾಯ ಪಡೆ) ಇವುಗಳ ಹೆಸರನ್ನು ಕೊಟ್ಟಿರುವ ಜಾಗದಲ್ಲಿ ಬರೆ.



©KTBS Not to be republished


ಬೇರು, ಕಾಂಡ, ಕೊಂಬೆ, ಎಲೆ, ಹೂ, ಹಣ್ಣುಗಳು ಸಸ್ಯದ ಮುಖ್ಯ ಭಾಗಗಳು.

ನೀನು ಗುರುತಿಸಿರುವ ಇತರ ಸಸ್ಯದ ಭಾಗಗಳ ಹೆಸರನ್ನು ಇಲ್ಲಿ ಬರೆ.

_______________ _______________

_______________ _______________

ಈ ಚಿತ್ರಗಳಲ್ಲಿ ಕೊಟ್ಟಿರುವ ಸಸ್ಯಗಳ ಗಾತ್ರವನ್ನು ಗಮನಿಸು. ಈ ಸಸ್ಯಗಳ ಗಾತ್ರ ಒಂದೇ ಆಗಿದೆಯೇ ಎಂಬುದನ್ನು ಹೇಳು.




©KTBS Not to be republished

ನಮ್ಮ ಸುತ್ತಲೂ ಬಗೆ ಬಗೆಯ ಸಸ್ಯಗಳಿವೆ. ಇವುಗಳ ಗಾತ್ರವೂ ಬೇರೆ ಬೇರೆಯೆ.

- ಸಣ್ಣ ಗಾತ್ರದ ಸಸ್ಯಗಳನ್ನು ಗಿಡಗಳೆಂದು ಕರೆಯುತ್ತಾರೆ.
- ದೊಡ್ಡ ಗಾತ್ರದ, ಎತ್ತರವಾಗಿರುವ ಸಸ್ಯಗಳನ್ನು ಮರಗಳು ಎನ್ನುತ್ತಾರೆ.


ಹಾಗಲಕಾಯಿ, ದ್ರಾಕ್ಷಿ, ಪಡವಲಕಾಯಿ ಸಸ್ಯಗಳನ್ನು ನೀನು ಗಮನವಿಟ್ಟು ನೋಡು. ಇವು ಗಿಡ ಅಥವಾ ಮರಗಳಂತೆ ಕಾಣುತ್ತವೆಯೆ? ಇಲ್ಲವಾದರೆ, ಇವುಗಳನ್ನು ಏನೆಂದು ಕರೆಯುತ್ತಾರೆ?





ನಿನ್ನ ಮನೆಯ ಹಿರಿಯರು ಹಾಗಲ ಬಳ್ಳಿ, ದ್ರಾಕ್ಷಿ ಬಳ್ಳಿ, ಕುಂಬಳ ಬಳ್ಳಿ ಎಂದು ಹೇಳುವುದನ್ನು ನೀನು ಕೇಳಿರಬಹುದು. ಈ ಸಸ್ಯಗಳಿಗೆ ಸಣ್ಣಗಾತ್ರದ, ಉದ್ದವಾದ ಕಾಂಡವಿರುತ್ತದೆಯಲ್ಲವೆ? ಬಳ್ಳಿಗಳು ಬೆಳೆಯಲು ಆಧಾರ ಬೇಕು. ಹೀಗಾಗಿ ಇವು ನೆಲದ ಮೇಲೆ, ಮರ, ಚಪ್ಪರ, ಮನೆಗಳ ಮೇಲೆ ಹಬ್ಬಿಕೊಳ್ಳುತ್ತವೆ.

ಈ ಚಿತ್ರಗಳಲ್ಲಿ ಇರುವ ಸಸ್ಯಗಳ ಕಾಂಡಗಳ ಆಕಾರವನ್ನು ಗಮನಿಸು. ಇವು ಒಂದೇ ರೀತಿ ಇವೆಯೆ?




**ಸಸ್ಯಗಳ ಕಾಂಡಗಳ ಆಕಾರ, ಗಾತ್ರ, ಬಣ್ಣಗಳಲ್ಲಿ ವ್ಯತ್ಯಾಸವಿದೆ.**

© KTBS Not to be republished

ನೀನು ನೋಡಿರುವ ಬೇರೆ ಬೇರೆ ಸಸ್ಯದ ಹೆಸರುಗಳನ್ನು ಗಿಡ, ಮರ, ಬಳ್ಳಿ ಎಂಬುದಾಗಿ ಗುರುತಿಸಿ, ಆಯಾ ಪಟ್ಟಿಯಲ್ಲಿ ಬರೆ.

| ಗಿಡ | ಮರ | ಬಳ್ಳಿ |
|---|---|---|
| | | |
| | | |
| | | |
| | | |
| | | |

ಎಲೆಗಳ ಚಿತ್ರಗಳನ್ನು ಗಮನಿಸು, ಈ ಎಲೆಗಳು ಒಂದೇ ರೀತಿಯಾಗಿರುವವೆ?



ಕೆಲವು ಎಲೆಗಳು ಚಿಕ್ಕದಾಗಿರುತ್ತವೆ. ಕೆಲವು ದೊಡ್ಡದಾಗಿರುತ್ತವೆ. ಆಕಾರವೂ ಬೇರೆ ಬೇರೆ. ಸಾಮಾನ್ಯವಾಗಿ ಎಲ್ಲಾ ಎಲೆಗಳ ಬಣ್ಣ ಹಸಿರಾಗಿರುತ್ತದೆ.

©KTBS Not to be republished

ಈ ಎಲೆಗಳ ಚಿತ್ರಗಳಿಗೆ ಬಣ್ಣ ಹಾಕು.



©KTBS
Not to be republished

ಒಣಗಿದ ಎಲೆಗಳನ್ನು ಸಂಗ್ರಹಿಸಿ, ಕೆಳಗೆ ಕೊಟ್ಟಿರುವ ಚೌಕದಲ್ಲಿ ಅವುಗಳನ್ನು ಅಂಟಿಸಿ, ಹೆಸರು ಬರೆ.

©KTBS
be republished

ಇದೊಂದು ಹೂದೋಟ. ಇಲ್ಲಿ ಅರಳಿರುವ ಹೂಗಳನ್ನು ಗಮನಿಸು.



ಈ ಹೂಗಳು ನಿಮ್ಮ ಊರಿನಲ್ಲಿ ಕಂಡುಬಂದಲ್ಲಿ (✓) ಗುರುತು ಹಾಕು.













© KTBS Not to be republished

**ಉತ್ತರಿಸು**

- ನೀನು ಯಾವ ಹೂಗಳನ್ನು ನೋಡಿದ್ದೀಯಾ? ಅವುಗಳ ಹೆಸರನ್ನು ಹೇಳು.
- ನಿನ್ನ ಮನೆಯಲ್ಲಿರುವ ಕೈತೋಟದಲ್ಲಿ ಯಾವ ಹೂ ಗಿಡಗಳಿವೆ? ಹೇಳು. ಈ ಹೂಗಳು ಒಂದೇ ರೀತಿ ಇವೆಯೆ?
- ನಿನ್ನ ಕೈತೋಟದಲ್ಲಿ ಬಿಡುವ ಹೂಗಳ ಬಣ್ಣಗಳೇನು?

**ಹೂಗಳ ಬಣ್ಣ ಅನೇಕ. ಕೆಂಪು, ನೀಲಿ, ಬಿಳಿ, ಹಳದಿ ಹೀಗೆ ಹಲವಾರು.**

ಚಿತ್ರದಲ್ಲಿರುವ ಹೂಗಳ ಬಣ್ಣಗಳನ್ನು ನೋಡು. ಈಗ ನೀನು ಅದೇ ಬಣ್ಣದ ಮತ್ತೊಂದು ಹೂವಿನ ಹೆಸರು ಬರೆ.




_______________



_______________



_______________



_______________



_______________

© KTBS Not to be republished

## ಹಾಡಿ ನಲಿ

ಗಿಡ, ಮರ, ಬಳ್ಳಿ ನೋಡು
ಸಸ್ಯದ ಬಗೆಗಳು;
ಕಾಂಡ, ಎಲೆ, ಹೂಗಳು
ಸಸ್ಯದ ಭಾಗಗಳು.

ಮಾವು, ಬೇವು, ತೆಂಗು, ಹೊಂಗೆ
ಮರಕೆ ಬಳ್ಳಿ ಹಬ್ಬಿದೆ;
ಮಳೆಗೆ ತೋಯ್ದು, ಕೊಂಬೆ ಹೊಯ್ದು
ಗಿಡವು ಬಾಗಿ ನಿಂತಿದೆ.

ಸಣ್ಣ, ದಪ್ಪ, ಗಿಡ್ಡ, ಉದ್ದ
ಕಾಂಡಗಳು ತುಂಬಿವೆ;
ದೊಡ್ಡ, ಚಿಕ್ಕ ಎಲೆಗಳೆಲ್ಲ
ಅದರ ತುಂಬ ಹರಡಿವೆ.

ಮಲ್ಲೆ, ಜಾಜಿ, ಸಂಪಿಗೆ
ಪರಿಮಳವ ಹರಡಿವೆ;
ಬಣ್ಣ, ಬಣ್ಣ ಕುಸುಮ
ನಮ್ಮ ಮನವ ಸೆಳೆದಿವೆ.

©KTBS Not to be republished

## ಪಾಠ – 4

# ನಾವಿರುವುದು ನಿಮಗಾಗಿ


**ಈ ಪಾಠವನ್ನು ಕಲಿತ ನಂತರ ನೀನು,**

- ದೈನಂದಿನ ಅವಶ್ಯಕತೆಗಳಿಗಾಗಿ ನಾವು ಸಸ್ಯಗಳನ್ನು ಅವಲಂಬಿಸಿರುವುದನ್ನು ಗುರುತಿಸುವೆ.

**ಚಿತ್ರವನ್ನು ಗಮನಿಸು**



ನನ್ನ ಕಾಯಿ ಬಹಳ ರುಚಿ
ಎಳನೀರು ಬಹಳ ಸಿಹಿ
ಒಣ ಗರಿಗಳು ಸೌದೆಗೆ
ಎಲೆಯ ಕಡ್ಡಿ ಪೊರಕೆಗೆ
ನನ್ನ ನಾರು ಚಾಪೆಗೆ
ಉಳಿದದು ಹಗ್ಗಕ್ಕೆ
ನಾನು ಯಾರು ? ________



**ತೆಂಗು ಏನೇನು ಕೊಡುತ್ತದೆ? ಯೋಚಿಸಿ ಬರೆ.**


________________ ________________

________________ ________________


________________ ________________

________________ ________________

Not to be republished



ರುಚಿ ರುಚಿ ಹಣ್ಣು
ಕಾಯಿಯ ಪಲ್ಲೆ
ಊಟಕೆ ಎಲೆ
ಹಬ್ಬಕೆ ಕಂದು
ನಾನು ಯಾರು ? ________



©KTBS Not to be republished

**ಉತ್ತರಿಸು.**


- ಚಿತ್ರದಲ್ಲಿರುವ ಗಿಡ ಯಾವುದು?
- ಈ ಗಿಡದಿಂದ ಏನೇನು ಪ್ರಯೋಜನ ಪಡೆಯುತ್ತೇವೆ? ಇಲ್ಲಿ ಬರೆ.

  ______________________________

  ______________________________

- ಹಣ್ಣಿನ ಮರಗಳ ಹೆಸರುಗಳನ್ನು ಹೇಳು.
- ಯಾವ ಯಾವ ಸಸ್ಯದ ಎಲೆಗಳನ್ನು ಊಟದ ಎಲೆಗಳಾಗಿ ಬಳಸುತ್ತಾರೆ? ಕೇಳಿ ತಿಳಿದುಕೊ.

**ಸಸ್ಯಗಳಿಂದ ನಮಗೆ ಎಲೆ, ಹಣ್ಣು, ಸೌದೆ, ನಾರು ಇತ್ಯಾದಿ ಹಲವು ಪದಾರ್ಥಗಳು ದೊರೆಯುತ್ತವೆ.**



ಚಿತ್ರದಲ್ಲಿ ಕಾಣುವ ಹಣ್ಣುಗಳ, ತರಕಾರಿಗಳ ಹೆಸರುಗಳನ್ನು ಹೇಳು.

©KTBS Not to be republished

ನೀನು ತಿಂದಿರುವ 5 ಧಾನ್ಯಗಳು, 5 ತರಕಾರಿಗಳು ಮತ್ತು 5 ಹಣ್ಣುಗಳ ಹೆಸರುಗಳನ್ನು ಇಲ್ಲಿ ಬರೆ.

| ಧಾನ್ಯಗಳು | ತರಕಾರಿಗಳು | ಹಣ್ಣುಗಳು |
|---|---|---|
| ______ | ______ | ______ |
| ______ | ______ | ______ |
| ______ | ______ | ______ |
| ______ | ______ | ______ |
| ______ | ______ | ______ |

**ಸಸ್ಯಗಳಿಂದ ಅಕ್ಕಿ, ಬೇಳೆ, ಜೋಳ, ರಾಗಿಯಂತಹ ಧಾನ್ಯಗಳೂ,**
**ಸೊಪ್ಪು, ಹುರಳಿಕಾಯಿ, ಕ್ಯಾರೆಟ್‌ನಂತಹ ತರಕಾರಿಗಳೂ,**
**ದ್ರಾಕ್ಷಿ, ಕಿತ್ತಳೆಯಂತಹ ಹಣ್ಣುಗಳೂ ದೊರೆಯುತ್ತವೆ.**

## ಹಾಡಿ ನಲಿ

ತರ ತರ ತರಹದ ತರಕಾರಿ
ಮಾರುತ ಬಂದಳು ಕಾವೇರಿ
ಬಣ್ಣದ ಹಣ್ಣು ತರಾವರಿ
ನೋಟವು ಕಣ್ಣಿಗೆ ತಂತು ಸಿರಿ
ರುಚಿ ರುಚಿ ಬಾಯಲಿ ನೀರೂರಿ
ಕೊಂಡಳು ತಿನ್ನಲು ಕಸ್ತೂರಿ






ಇಲ್ಲಿದೆ ಚಂದದ ಕೈತೋಟ
ಜಾಜಿ, ಮಲ್ಲಿಗೆ ಹೂದೋಟ
ಘಮ ಘಮ ಪರಿಮಳ ಹರಿದಾಟ
ದುಂಬಿ ಹೂಗಳ ಒಡನಾಟ

©KTBS Not to be republished







©KTBS Not to be republished

**ಉತ್ತರಿಸು.**

- ನಿನ್ನ ಮನೆಯಲ್ಲಿ ಯಾವ ಯಾವ ಹೂಗಳನ್ನು ಬಳಸುತ್ತಾರೆ? ಏಕೆ?
- ನಿನ್ನ ಮನೆಯ ತೋಟದಲ್ಲಿ ಬೆಳೆದಿರುವ ಹೂಗಳ ಹೆಸರುಗಳನ್ನು ಹೇಳು.

**ಸಸ್ಯಗಳಿಂದ ವಿವಿಧ ಹೂಗಳು ದೊರೆಯುತ್ತವೆ. ಹೂಗಳನ್ನು ಅಲಂಕಾರಕ್ಕಾಗಿ ಉಪಯೋಗಿಸುತ್ತೇವೆ.**

ಚಿತ್ರ ನೋಡು. ಕೆಮ್ಮು, ಜ್ವರ ಬಂದಾಗ ನೀನೆಂದಾದರೂ ಸಸ್ಯದ ಭಾಗಗಳನ್ನು ಸೇವಿಸಿರುವೆಯಾ?




©KTBS
Not to be republished

## ಹಾಡಿ ನಲಿ

ಕೆಮ್ಮು ಕೆಮ್ಮು ಬಂತಲ್ಲಿ
ಪಕ್ಕೆಯ ಹಿಡಿಯಿತು ಕೂತಲ್ಲಿ ;
ತುಳಸಿಯ ಕಷಾಯ ಕುಡಿಯಿಲ್ಲಿ
ನಿಂತಿತು ಕೂಡಲೇ ಕೆಮ್ಮಲ್ಲಿ.

ನಿನ್ನ ಮನೆಯಲ್ಲಿ ಯಾವ ಸಸ್ಯಗಳನ್ನು ಔಷಧಕ್ಕಾಗಿ ಉಪಯೋಗಿಸುತ್ತಾರೆ? ಹಿರಿಯರನ್ನು ಕೇಳಿ ತಿಳಿದುಕೊ. ಅಂತಹ 5 ಸಸ್ಯಗಳ ಹೆಸರು ಬರೆ.

______________________ ______________________





______________________ ______________________

______________________

**ಅನೇಕ ಸಸ್ಯಗಳನ್ನು ಔಷಧಕ್ಕಾಗಿ ಉಪಯೋಗಿಸುತ್ತಾರೆ.**
**ಉದಾಹರಣೆ : ತುಳಸಿ, ನಿಂಬೆ, ತುಂಬೆ ಇತ್ಯಾದಿ.**


ಯಾವ ಸಸ್ಯಗಳನ್ನು ಯಾವ ಕಾಯಿಲೆಗೆ ಔಷಧವನ್ನಾಗಿ ಉಪಯೋಗಿಸುತ್ತಾರೆ? ಹಿರಿಯರನ್ನು ಕೇಳಿ ತಿಳಿದುಕೊ. ನಿನ್ನ ಸ್ನೇಹಿತರೊಂದಿಗೆ ಚರ್ಚಿಸು.

**ಹೊಂದಿಸಿ ಗೆರೆ ಎಳೆ.**

| | |
|---|---|
|  |  |
|  |  |
|  |  |
|  |  |
|  |  |

©KTBS Not to be republished


ಈ ಚಿತ್ರವನ್ನು ಗಮನಿಸು. ಪ್ರಾಣಿಗಳಿಗೆ ಸಸ್ಯಗಳು ಏಕೆ ಬೇಕು? ಉತ್ತರಿಸು.



ಪ್ರಾಣಿಗಳಿಗೂ ಸಸ್ಯಗಳು ಬೇಕು.

©KTBS Not to be republished

ವೃತ್ತದ ಮಧ್ಯೆ ಸಸ್ಯವಿದ್ದು, ಸುತ್ತಲೂ ಕೆಲವು ವಸ್ತುಗಳನ್ನು ಕೊಟ್ಟಿದೆ. ಸಸ್ಯಗಳಿಂದ ದೊರೆಯುವ ವಸ್ತುಗಳಿಗೆ ಮಾತ್ರ ಗೆರೆ ಎಳೆ.




©KTBS Not to be republished

ಸಸ್ಯಗಳಿಂದ ನಮಗೆ ಧಾನ್ಯ, ತರಕಾರಿ, ಹಣ್ಣು, ಹೂ, ನಾರು, ಔಷಧಿ, ಮನೆಕಟ್ಟಲು ಮರಮುಟ್ಟು, ಗೊಬ್ಬರ ಇತ್ಯಾದಿ ಹಲವು ಪದಾರ್ಥಗಳು ದೊರೆಯುತ್ತವೆ. ಪ್ರಾಣಿಗಳಿಗೂ ಆಹಾರ, ಗೂಡುಕಟ್ಟಲು ಜಾಗ ಇತ್ಯಾದಿಗಳು ಸಿಗುತ್ತವೆ.

ಪಾಠ – 5

# ಅಮೂಲ್ಯ ನೀರು

**ಈ ಪಾಠವನ್ನು ಕಲಿತ ನಂತರ ನೀನು,**

- ಸ್ಥಳೀಯ ನೀರಿನ ಆಕರಗಳನ್ನು ಗುರುತಿಸುವೆ.
- ಕುಡಿಯಲು ಶುದ್ಧ ನೀರು ಬೇಕು ಎಂಬುದನ್ನು ಅರಿಯುವೆ.
- ನೀರಿನ ಸಂಗ್ರಹಣೆ ಮತ್ತು ಬಳಕೆಯ ಬಗ್ಗೆ ತಿಳಿಯುವೆ.
- ಸಸ್ಯ ಮತ್ತು ಪ್ರಾಣಿಗಳಿಗೆ ನೀರಿನ ಅವಶ್ಯಕತೆ ಇದೆ ಎಂಬುದನ್ನು ಗುರುತಿಸುವೆ.

ನೀರಿನ ಉಪಯೋಗಗಳ ಬಗ್ಗೆ ಈಗಾಗಲೇ ನೀನು ತಿಳಿದಿರುವೆ.

**ನಿನ್ನ ಮನೆಯಲ್ಲಿ ನೀರನ್ನು ಯಾವ ಯಾವ ಕೆಲಸಗಳಿಗೆ ಉಪಯೋಗಿಸುತ್ತಾರೆ? ಪಟ್ಟಿ ಮಾಡು.**

_______________ _______________

_______________ _______________

_______________ _______________

ಈ ಚಿತ್ರ ನೋಡು. ರಾಜು ತನ್ನ ಮನೆಗೆ ಕುಡಿಯುವ ನೀರನ್ನು ಬಾವಿಯಿಂದ ತರುತ್ತಿದ್ದಾನೆ.



ನಿನ್ನ ಮನೆಗೆ ಬೇಕಾದ ನೀರನ್ನು ಎಲ್ಲಿಂದ ತರುತ್ತಾರೆ? ಗಮನಿಸು.

©KTBS Not to be republished

### ನಿನ್ನ ಮನೆಯ ಈ ಕೆಲಸಗಳಿಗೆ ನೀರನ್ನು ಎಲ್ಲಿಂದ ತರುತ್ತಾರೆ?

| | |
|---|---|
|  | |
|  | |
|  | |
|  | |
|  | |

ನೀರನ್ನು ಸಾಮಾನ್ಯವಾಗಿ ಬಾವಿ, ನಲ್ಲಿ, ಕೆರೆಗಳಿಂದ ಸಂಗ್ರಹಿಸುತ್ತೇವೆ.

KTBS Not to be republished

ಕೆಳಗಿನ ಚೌಕಗಳಲ್ಲಿ ನೀರಿನ ಆಕರಗಳನ್ನು ಕೊಟ್ಟಿದೆ. ನೀನು ನೋಡಿರುವ ನೀರಿನ ಆಕರಗಳಿಗೆ 'ನೋಡಿದ್ದೇನೆ' ಎನ್ನುವ ಚೌಕದಲ್ಲಿ (✓) ಗುರುತನ್ನು ಹಾಕು. ನಿನ್ನ ಮನೆಯಲ್ಲಿ ಬಳಸುವ ನೀರನ್ನು ತರುವ ಆಕರಗಳಿಗೆ 'ಬಳಸುತ್ತೇನೆ' ಎನ್ನುವ ಚೌಕದಲ್ಲಿ (✓) ಗುರುತು ಹಾಕು. ಆನಂತರ ಆ ನೀರನ್ನು ನಿಮ್ಮ ಮನೆಯ ಯಾವ ಕೆಲಸಕ್ಕೆ ಬಳಸುತ್ತಾರೆ ಎಂಬುದನ್ನು ಬರೆ.

| ನೀರಿನ ಆಕರಗಳು | ನೋಡಿದ್ದೇನೆ | ಬಳಸುತ್ತೇನೆ | ಕೆಲಸ |
|---|---|---|---|
|  | | | |
|  | | | |
|  | | | |
|  | | | |

©KTBS Not to be republished

| ನೀರಿನ ಆಕರಗಳು | ನೋಡಿದ್ದೇನೆ | ಬಳಸುತ್ತೇನೆ | ಕೆಲಸ |
|---|---|---|---|
|  | | | |
|  | | | |
|  | | | |

ನಿನ್ನ ಊರಿನಲ್ಲಿರುವ 4 ನೀರಿನ ಆಕರಗಳನ್ನು ಹೆಸರಿಸು.

______________________________

______________________________

______________________________

______________________________

©KTBS Not to be republished

ಈ ಚಿತ್ರಗಳನ್ನು ನೋಡು. ವನಜಾಳು ನೀರನ್ನು ವಿವಿಧ ಕೆಲಸಗಳಿಗಾಗಿ ಸಂಗ್ರಹಿಸುತ್ತಿದ್ದಾಳೆ. ವನಜ ಮಾಡುತ್ತಿರುವ ಕೆಲಸಗಳಲ್ಲಿ ಒಂದು ಕ್ರಮವಿದೆ. ಈ ಕೆಲಸಗಳನ್ನು ಕ್ರಮವಾಗಿ ಪತ್ತೆಹಚ್ಚಿ, ಸಂಖ್ಯೆಗಳನ್ನು ಬರೆ.













©KTBS Not to be republished

ಈ ಚಿತ್ರಗಳನ್ನು ಗಮನಿಸು. ನೀನು ಯಾವ ನೀರನ್ನು ಕುಡಿಯಲು ಬಳಸುವೆ? ಏಕೆ? ಹೇಳು.





ನಿನ್ನ ಮನೆಯಲ್ಲಿ ಬಳಸುವ ನೀರಿನ ಆಕರವನ್ನು ಈಗಾಗಲೇ ಗುರುತಿಸಿದ್ದೀಯ. ಹಾಗೆಯೇ ಶಾಲೆಯಲ್ಲಿ ಬಳಸುವ ನೀರಿನ ಆಕರವನ್ನೂ ಗಮನಿಸಿದ್ದೀಯ. ಈ ನೀರಿನ ಆಕರವನ್ನೆ ಮನೆಯಲ್ಲಾಗಲಿ ಅಥವಾ ಶಾಲೆಯಲ್ಲಾಗಲಿ ಏಕೆ ಬಳಸುತ್ತಾರೆ? ಕೇಳಿ ತಿಳಿದುಕೊ.

ಚಿತ್ರ ನೋಡಿ ಕಥೆ ಹೇಳು.









©KTBS Not to be republished



ಈ ಕಥೆಯಿಂದ ನೀನೇನು ತಿಳಿದೆ?

ಈ ಚಿತ್ರಗಳನ್ನು ಗಮನಿಸು, ಇಲ್ಲೇನಾಗುತ್ತಿದೆ ಹೇಳು.



©KTBS Not to be republished


- ಕುಡಿಯುವ ನೀರು ಶುದ್ಧವಾಗಿರಬೇಕು.
- ನೀರನ್ನು ಸಂಗ್ರಹಿಸುವ ಪಾತ್ರೆಗಳನ್ನು, ಕುಡಿಯುವ ಲೋಟಗಳನ್ನು ಚೆನ್ನಾಗಿ ತೊಳೆದು ಶುದ್ಧವಾಗಿರಿಸಿಕೊಳ್ಳಬೇಕು.
- ನೀರಿನ ಪಾತ್ರೆಗೆ ಕೈ ಅದ್ದದೆ, ಹಿಡಿಕೆ ಬಟ್ಟಲುಗಳಿಂದ ನೀರನ್ನು ತೆಗೆದುಕೊಳ್ಳಬೇಕು.
- ನೀರನ್ನು ಸಂಗ್ರಹಿಸಿರುವ ಪಾತ್ರೆಗಳನ್ನು ಮುಚ್ಚಬೇಕು.
- ನೀರನ್ನು ಕುದಿಸಿ, ಆರಿಸಿ ಕುಡಿದರೆ ಉತ್ತಮ.

ಈ ಅಭ್ಯಾಸಗಳನ್ನು ನೀನು ಬೆಳೆಸಿಕೊ, ನಿನ್ನ ಆರೋಗ್ಯವನ್ನು ಕಾಪಾಡಿಕೊ.

**ಈ ಚಿತ್ರಗಳನ್ನು ಗಮನಿಸು.**










©KTBS Not to be republished



- ನಿನ್ನ ಮನೆಯಲ್ಲಿ ಪ್ರಾಣಿಗಳನ್ನು ಸಾಕಿದ್ದರೆ, ಅವುಗಳಿಗೆ ಯಾವ ನೀರನ್ನು ಕೊಡುತ್ತೀರಿ?
- ನಿನ್ನ ಮನೆಯ ಸಸ್ಯಗಳಿಗೆ ನೀರನ್ನು ಹಾಕುವೆಯಾ? ನೀರು ಹಾಕದಿದ್ದರೆ ಸಸ್ಯಗಳು ಏನಾಗುತ್ತವೆ?
- ಸಸ್ಯ ಮತ್ತು ಪ್ರಾಣಿಗಳಿಗೂ ನೀರು ಬೇಕು ಅಲ್ಲವೆ? ಕೆಲವು ಸಸ್ಯ ಮತ್ತು ಪ್ರಾಣಿಗಳು ನೀರಿನಲ್ಲಿಯೇ ಜೀವಿಸುತ್ತವೆ.

**ನೀರು ಮಾನವರಿಗೆ, ಪ್ರಾಣಿಗಳಿಗೆ, ಸಸ್ಯಗಳಿಗೆ ಬೇಕು. ನೀರಿಲ್ಲದೆ ಜೀವಿಸಲು ಸಾಧ್ಯವಿಲ್ಲ. ಇದನ್ನು ಪೋಲು ಮಾಡದೆ ಕಾಪಾಡಿಕೊಳ್ಳಬೇಕು. ನೀರನ್ನು ಶುದ್ಧವಾಗಿರಿಸಿಕೊಳ್ಳಬೇಕು.**

© KTBS Not to be republished

# ಪಾಠ – 6

## ಬಗೆ ಬಗೆಯ ಆಹಾರ

**ಈ ಪಾಠವನ್ನು ಕಲಿತ ನಂತರ ನೀನು,**


- ಸಸ್ಯ ಮತ್ತು ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳನ್ನು ಗುರುತಿಸುವೆ.
- ಕುಟುಂಬದಲ್ಲಿನ ವಿವಿಧ ಆಹಾರಭ್ಯಾಸಗಳನ್ನು ಗುರುತಿಸುವೆ.
- ಹಸಿಯಾಗಿ ಹಾಗೂ ಬೇಯಿಸಿ ತಿನ್ನುವ ಆಹಾರ ಪದಾರ್ಥಗಳನ್ನು ಹೆಸರಿಸುವೆ.
- ಅಡುಗೆ ಮಾಡಲು ಬಳಸುವ ವಿವಿಧ ಪಾತ್ರೆಗಳನ್ನು ಹೆಸರಿಸುವೆ.
- ಪ್ರಾಣಿಗಳ ಆಹಾರವನ್ನು ಗುರುತಿಸುವೆ.

ಆಹಾರ ಅತಿ ಆವಶ್ಯಕ ಎಂದು ನಿನಗೆ ತಿಳಿದಿದೆ. ನೀನು ದಿನವೂ ಆಹಾರವನ್ನು ಸೇವಿಸುವೆ. ಆಹಾರವನ್ನು ಸೇವಿಸದೆ ಇದ್ದರೆ ಏನಾಗುತ್ತದೆ? ಹೇಳು.

**ಈ ಚಿತ್ರದಲ್ಲಿ ತೋರಿಸಿರುವ ಆಹಾರ ಪದಾರ್ಥಗಳನ್ನು ನೋಡು. ಇವುಗಳು ಎಲ್ಲಿಂದ ದೊರೆಯುತ್ತವೆ ಎಂದು ಹೇಳು.**

| | | |
|---|---|---|
|  ಅಕ್ಕಿ |  ಗೋಧಿ |  ಮೆಕ್ಕೆಜೋಳ |
|  ಜೋಳ |  ಬೇಳೆ |  ಹೆಸರುಕಾಳು |

©KTBS Not to be republished

| | | |
|---|---|---|
|  ರಾಗಿ |  ಸಜ್ಜೆ |  ಬೀಟ್‌ರೂಟ್ |
|  ಬಾಳೆ ಹಣ್ಣು |  ಕಡಲೆಕಾಳು |  ಎಲೆಕೋಸು |
|  ಸೌತೆಕಾಯಿ |  ಬದನೆಕಾಯಿ |  ಆಲೂಗಡ್ಡೆ |
|  ಪಡವಲಕಾಯಿ |  ಬೆಂಡೆಕಾಯಿ |  ಕುಂಬಳಕಾಯಿ |
|  ಹಾಗಲಕಾಯಿ |  ಮೂಲಂಗಿ |  ಬಸಳೆಸೊಪ್ಪು |

©KTBS Not to be republished



ಟೊಮ್ಯಾಟೊ




ಮಾವಿನಹಣ್ಣು



ಸೇಬು

**ಈ ಚಿತ್ರಗಳಲ್ಲಿ ತೋರಿಸಿರುವ ಆಹಾರ ಪದಾರ್ಥಗಳು ಎಲ್ಲಿಂದ ದೊರೆಯುತ್ತವೆ?**



ಮೊಟ್ಟೆ



ಮಾಂಸ




ಮೀನು



ಹಾಲು

©KTBS Not to be republished

ಈ ಚಿತ್ರಗಳಲ್ಲಿ ಕೆಲವು ಆಹಾರಗಳನ್ನು ತೋರಿಸಿದೆ. ಇವುಗಳಲ್ಲಿ ಸಸ್ಯಗಳಿಂದ ದೊರೆಯುವ ಆಹಾರಗಳಿಗೆ ಹಸಿರು ಚುಕ್ಕೆಯನ್ನು, ಪ್ರಾಣಿಗಳಿಂದ ದೊರೆಯುವ ಆಹಾರಗಳಿಗೆ ಕೆಂಪು ಚುಕ್ಕೆಯನ್ನು ಹಾಕು.

| | | |
|---|---|---|
|  ಅಕ್ಕಿ |  ಮೀನು |  ಬದನೆಕಾಯಿ |
|  ಬಟಾಣಿ |  ಹಾಲು |  ಕಾಳುಮೆಣಸು |
|  ಬೆಂಡೆಕಾಯಿ |  ಮಾಂಸ |  ಮೆಣಸಿನಕಾಯಿ |
|  ಮೊಸರು |  ಸೌತೆಕಾಯಿ |  ಸೊಪ್ಪು |
|  ಚಹ |  ಜೋಳ |  ರಾಗಿ |

©KTBS Not to be republished

**ನಿನ್ನ ಮನೆಯಲ್ಲಿ ಉಪಯೋಗಿಸುವ ಆಹಾರ ಪದಾರ್ಥಗಳನ್ನು ಕೆಳಗೆ ಕೊಟ್ಟ ಗುಂಪುಗಳಲ್ಲಿ ವಿಂಗಡಿಸಿ ಬರೆ.**

| ಸಸ್ಯಗಳಿಂದ ದೊರೆಯುವ ಆಹಾರ ಪದಾರ್ಥಗಳು | ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳು |
|---|---|
| ____________________ | ____________________ |
| ____________________ | ____________________ |
| ____________________ | ____________________ |
| ____________________ | ____________________ |
| ____________________ | ____________________ |

ಆಹಾರ ಪದಾರ್ಥಗಳನ್ನು ಸಾಮಾನ್ಯವಾಗಿ ಬೇಯಿಸಿ, ಕೆಲವೊಮ್ಮೆ ಹಸಿಯಾಗಿ ತಿನ್ನುತ್ತಾರೆ ಎಂದು ನಿನಗೆ ತಿಳಿದಿದೆ.

**ಈ ಚಿತ್ರಗಳನ್ನು ಗಮನಿಸು.**

| | |
|---|---|
|  | ಒಳ್ಳೆಯ ಆರೋಗ್ಯಕ್ಕಾಗಿ ಇದನ್ನು ಹಸಿಯಾಗಿಯೇ ತಿನ್ನುತ್ತಾರೆ. |
|  | ಇದನ್ನು ಹಸಿಯಾಗಿ ತಿಂದರೆ ತುಂಬಾ ರುಚಿಯಂತೆ! |

©KTBS
Not to be republished

| | |
|---|---|
|  | ಇದು ಸ್ವಲ್ಪ ಖಾರ,<br>ಆದರೂ ಇದನ್ನು ಹಸಿಯಾಗಿ<br>ತಿನ್ನುತ್ತಾರೆ. |
|  | ಇದನ್ನು ದಿನವೂ ತಿಂದರೆ<br>ರೋಗಗಳೆಲ್ಲಾ ಪರಾರಿ! ಗೊತ್ತೆ? |
|  | ಊಟದಲ್ಲಿ ಇದು ಇದ್ದರೆ ನಿನಗೆ<br>ಬಹಳ ಇಷ್ಟ, ಅಲ್ಲವೆ? |
|  | ಇದನ್ನು ಎಲ್ಲರೂ ಇಷ್ಟಪಡುತ್ತಾರೆ.<br>ಇದು ಬಹಳ ರುಚಿಕರ. |

ನೀನು ಹಸಿಯಾಗಿ ತಿನ್ನುವ ಆಹಾರ ಪದಾರ್ಥಗಳ ಹೆಸರನ್ನು ಹೇಳು.

©KTBS Not to be republished

**ಹಸಿಯಾಗಿ ತಿನ್ನುವ 5 ಮತ್ತು ಬೇಯಿಸಿ ತಿನ್ನುವ 5 ಆಹಾರ ಪದಾರ್ಥಗಳನ್ನು ಹೆಸರಿಸು.**

| ಹಸಿಯಾಗಿ ತಿನ್ನುವ ಆಹಾರ ಪದಾರ್ಥಗಳು | ಬೇಯಿಸಿ ತಿನ್ನುವ ಆಹಾರ ಪದಾರ್ಥಗಳು |
|---|---|
| 1. ______________ | ______________ |
| 2. ______________ | ______________ |
| 3. ______________ | ______________ |
| 4. ______________ | ______________ |
| 5. ______________ | ______________ |

ನೀನು ಹೆಸರಿಸಿದ ಆಹಾರ ಪದಾರ್ಥಗಳಲ್ಲಿ ಯಾವುದು ನಿನಗೆ ಹೆಚ್ಚು ಇಷ್ಟ? ಏಕೆ?

**ಕ್ಯಾರೆಟ್, ಮೂಲಂಗಿ, ಸೌತೆಯಂತಹ ತರಕಾರಿಗಳನ್ನು, ಹಣ್ಣುಗಳನ್ನು ಹಸಿಯಾಗಿ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು. ಆದರೆ ಇವುಗಳನ್ನು ನೀರಿನಲ್ಲಿ ಚೆನ್ನಾಗಿ ತೊಳೆದು ತಿನ್ನಬೇಕು.**

©KTBS Not to be republished

ವಿವಿಧ ಆಹಾರ ಪದಾರ್ಥಗಳ ಸಣ್ಣ ಚಿತ್ರಗಳನ್ನು ಸಂಗ್ರಹಿಸಿ, ವಿಂಗಡಿಸಿ, ಕೊಟ್ಟಿರುವ ಖಾಲಿ ಜಾಗದಲ್ಲಿ ಅಂಟಿಸು.

| ಸಸ್ಯಗಳಿಂದ ದೊರೆಯುವ ಆಹಾರ ಪದಾರ್ಥಗಳು | ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳು |
|---|---|
| | |

©KTBS Not to be republished



ಕಮಲ ಮತ್ತು ರಾಜು ಶಾಲೆಗೆ ಬರುವ ಮುನ್ನ ತಿಂಡಿಯನ್ನು ತಿನ್ನುತ್ತಾರೆ. ಶಾಲೆಯಲ್ಲಿ ಗೆಳೆಯ/ಗೆಳತಿಯರೊಡನೆ ಮಧ್ಯಾಹ್ನದ ಊಟಮಾಡಿ, ಸಂಜೆ ಶಾಲೆಯ ನಂತರ ಮನೆಗೆ ಹೋಗಿ ಹಣ್ಣನ್ನು ತಿನ್ನುತ್ತಾರೆ. ಆನಂತರ ಓದು, ಬರಹದಲ್ಲಿ ತೊಡಗಿಸಿಕೊಳ್ಳುತಾರೆ. ರಾತ್ರಿ ಅವರ ಮನೆಯವರೆಲ್ಲರೂ ಒಟ್ಟಾಗಿ ಕುಳಿತು ಊಟ ಮಾಡುತ್ತಾರೆ.

**ಉತ್ತರಿಸು.**

➤ ನಿನ್ನ ಮನೆಯ ಆಹಾರ ಅಭ್ಯಾಸವನ್ನು ಎರಡು ವಾಕ್ಯಗಳಲ್ಲಿ ಹೇಳು.

1. ________________________________

2. ________________________________

©KTBS Not to be republished

- ನಿನ್ನ ಮನೆಯಲ್ಲಿ ಮಾಡುವ ಮೂರು ತಿಂಡಿಗಳ ಹೆಸರು ಬರೆ.

1. ______________________________

2. ______________________________

3. ______________________________

- ನೀನು ಮಧ್ಯಾಹ್ನದ ಊಟವನ್ನು ಎಲ್ಲಿ ಮಾಡುವೆ?
  ಯಾರೊಂದಿಗೆ ಮಾಡುವೆ? ಏನೇನು ತಿನ್ನುವೆ ?

____________________________________________

____________________________________________

____________________________________________

- ನೀನು ರಾತ್ರಿಯ ಊಟ ಯಾರೊಂದಿಗೆ ಮಾಡುವೆ? ರಾತ್ರಿ ಊಟದಲ್ಲಿ ಏನೇನಿದ್ದರೆ ನಿನಗಿಷ್ಟ?

____________________________________________

____________________________________________

____________________________________________

- ನಿನ್ನ ಮತ್ತು ನಿನ್ನ ಕುಟುಂಬದಲ್ಲಿರುವವರ ಆಹಾರ ಅಭ್ಯಾಸ ಒಂದೇ ರೀತಿ ಇದೆಯೆ? ಅಥವಾ ಬೇರೆ ಬೇರೆ ರೀತಿ ಇದೆಯೆ? ಬೇರೆ ರೀತಿ ಇದ್ದಲ್ಲಿ, ಅದು ಹೇಗೆ? ಇಲ್ಲಿ ಬರೆ.

____________________________________________

____________________________________________

____________________________________________

©KTBS Not to be republished

ನಿನ್ನ ಮನೆಯಲ್ಲಿ ಅಡುಗೆಯನ್ನು ಯಾವುದರಲ್ಲಿ ಮಾಡುತ್ತಾರೆ?

**ಈ ಚಿತ್ರದಲ್ಲಿ ಅಡುಗೆಗೆ ಬಳಸುವ ವಿವಿಧ ಪಾತ್ರೆಗಳನ್ನು ತೋರಿಸಲಾಗಿದೆ. ನಿನ್ನ ಮನೆಯಲ್ಲಿ ಬಳಸುವ ಪಾತ್ರೆಗಳಿಗೆ (✓) ಗುರುತು ಹಾಕು.**






©KTBS Not to be republished

ಈ ಚಿತ್ರದಲ್ಲಿರುವ ಪ್ರಾಣಿ-ಪಕ್ಷಿಗಳು ಮತ್ತು ಅವುಗಳ ಆಹಾರವನ್ನು ಗಮನಿಸು. ಗೆಳೆಯರೊಂದಿಗೆ ಚರ್ಚಿಸು.










©KTBS Not to be republished

**ಕೆಲವು ಪ್ರಾಣಿಗಳು ಸಸ್ಯ ಮತ್ತು ಸಸ್ಯಗಳಿಂದ ದೊರೆಯುವ ಆಹಾರ ಪದಾರ್ಥಗಳನ್ನು ಮಾತ್ರ ಸೇವಿಸುತ್ತವೆ.**

**ಉದಾಹರಣೆ : ಜಿಂಕೆ, ಮೊಲ, ಕುರಿ, ಗಿಳಿ ಇತ್ಯಾದಿ.**

**ಇನ್ನು ಕೆಲವು ಪ್ರಾಣಿಗಳು ಇತರ ಪ್ರಾಣಿಗಳನ್ನು ಆಹಾರವಾಗಿ ಸೇವಿಸುತ್ತವೆ.**

**ಉದಾಹರಣೆ : ಹುಲಿ, ಸಿಂಹ, ಗಿಡುಗ ಇತ್ಯಾದಿ.**

ಸಲೀಂ ಮನೆಯಲ್ಲಿ ಬೆಕ್ಕು ಸಾಕಿದ್ದಾನೆ. ಅವನು ರಾತ್ರಿಯಲ್ಲಿ ಊಟ ಮಾಡುವಾಗ ಅವನ ಬೆಕ್ಕು ಮಿಯಾವ್ ಎಂದು ಬಾಲ ಅಲ್ಲಾಡಿಸುತ್ತಾ ಹತ್ತಿರ ಬರುತ್ತದೆ. ಸಲೀಂ ಬೆಕ್ಕಿಗೆ ಹಾಲು ಕೊಡುತ್ತಾನೆ. ಅದಕ್ಕೆ ಹಸಿವಾಗಿದೆ ಎಂದು ಅವನಿಗೆ ಗೊತ್ತು.



**ನಿನ್ನ ಸುತ್ತಮುತ್ತಲೂ ಹಲವಾರು ಪ್ರಾಣಿಗಳು ಇವೆಯಲ್ಲವೆ? ಅವುಗಳು ಸೇವಿಸುವ ಆಹಾರವನ್ನು ಪಟ್ಟಿಮಾಡು.**


| ಪ್ರಾಣಿಯ ಹೆಸರು | ಆಹಾರ |
|---|---|
| | |
| | |
| | |
| | |
| | |
| | |
| | |



©KTBS Not to be republished



ಇಲ್ಲಿ ಪ್ರಾಣಿಗಳ ಚಿತ್ರವನ್ನು ಮತ್ತು ಅವುಗಳು ಸೇವಿಸುವ ಆಹಾರ ಪದಾರ್ಥಗಳನ್ನು ಕೊಟ್ಟಿದೆ. ಅವುಗಳನ್ನು ಹೊಂದಿಸು.






ಹಕ್ಕಿಗಳಿಗೆ ಕಾಳು ನೀಡುವ ಅಭ್ಯಾಸವನ್ನು ಬೆಳೆಸಿಕೊ.

©KTBS Not to be republished

## ಪಾಠ – 7

# ಮನೆ ಬೇಕು ಮನೆ

**ಈ ಪಾಠವನ್ನು ಕಲಿತ ನಂತರ ನೀನು,**

- ಮನೆಯ ಅವಶ್ಯಕತೆಯನ್ನು ಗುರುತಿಸುವೆ. ಒಟ್ಟಾಗಿ ಬಾಳುವ ಅಗತ್ಯವನ್ನು ತಿಳಿಯುವೆ.
- ಮನೆಯ ವಿವಿಧ ಭಾಗಗಳನ್ನು ಪರಿಚಯ ಮಾಡಿಕೊಳ್ಳುವೆ.
- ಮನೆಯಲ್ಲಿ ಉಂಟಾಗುವ ವಿವಿಧ ಕಸವನ್ನು ಗುರುತಿಸುವೆ. ಇದರ ಸರಿಯಾದ ವಿಲೇವಾರಿ ಕ್ರಮವನ್ನು ಅರಿಯುವೆ.
- ಹಿಂದೆ, ಮುಂದೆ, ಎಡ, ಬಲ ಪದ ಬಳಸಿ ಮನೆಯ ಸುತ್ತ ಮುತ್ತಲಿನ ಸನ್ನಿವೇಶವನ್ನು ಗುರುತಿಸುವೆ.







©KTBS Not to be republished

**ಉತ್ತರಿಸು.**

- ನೀನು ಎಲ್ಲಿ ವಾಸಿಸುವೆ?
- ನಿಮ್ಮ ಮನೆಯಲ್ಲಿ ಯಾರು ಯಾರು ಇದ್ದಾರೆ?
- ನಿಮ್ಮ ಮನೆಯಲ್ಲಿ ಪ್ರಾಣಿಗಳನ್ನು ಸಾಕಿದ್ದೀರಾ?
- ಅವು ಎಲ್ಲಿ ವಾಸಿಸುತ್ತವೆ?


**ನಾವು ವಾಸಿಸಲು ಮನೆ ಬೇಕು. ಪ್ರಾಣಿಗಳೂ ವಾಸಿಸಲು ವಾಸಸ್ಥಳ ಬೇಕು.**

ಈ ಚಿತ್ರದಲ್ಲಿರುವ ಪ್ರಾಣಿಗಳನ್ನು ಮತ್ತು ಅವು ವಾಸಿಸುವ ಸ್ಥಳಗಳನ್ನು ಹೊಂದಿಸು.

| ಪ್ರಾಣಿಗಳು | ವಾಸಸ್ಥಳ |
|---|---|
|  |  |
|  |  |
|  |  |
|  |  |
|  |  |

ಚಳಿ, ಗಾಳಿ, ಮಳೆ, ಬಿಸಿಲಿಂದ ರಕ್ಷಣೆಯನ್ನು ಪಡೆಯಲು
ನಮಗೆಲ್ಲರಿಗೂ ಮನೆ ಬೇಕು.

© KTBS Not to be republished



**ಉತ್ತರಿಸು.**

- ಈ ಚಿತ್ರದಲ್ಲಿ ಕಾಣುವ ಮನೆಯಲ್ಲಿ ಯಾರು ಯಾರು ವಾಸಿಸುತ್ತಿದ್ದಾರೆ?
- ಇವರು ಏನೇನು ಮಾಡುತ್ತಿದ್ದಾರೆ?
- ನೀನು ಮನೆಯಲ್ಲಿ ಯಾವ ಕೆಲಸಗಳನ್ನು ಮಾಡುತ್ತಿಯಾ?
- ನಿನ್ನ ಮನೆಯಲ್ಲಿ ಯಾರು ಯಾರು, ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ?

**ಒಂದು ಮನೆಯಲ್ಲಿ ಒಂದು ಕುಟುಂಬದವರೆಲ್ಲ ಒಟ್ಟಾಗಿ ವಾಸಿಸುತ್ತಾರೆ. ಕುಟುಂಬದ ಪ್ರತಿಯೊಬ್ಬರೂ ಮನೆಯ ಕೆಲಸಗಳನ್ನು ಹಂಚಿಕೊಂಡು ಮಾಡುತ್ತಾರೆ. ಒಬ್ಬರಿಗೊಬ್ಬರು ಸಹಾಯವನ್ನೂ ಮಾಡುತ್ತಾರೆ. ಕೂಡಿಬಾಳುವುದರಲ್ಲಿ ಸಂತೋಷವಿದೆ.**

©KTBS Not to be republished

ಇಲ್ಲಿ ಮನೆಯ ಚಿತ್ರವನ್ನು ನೀಡಿದೆ. ನಿನಗೆ ಗೊತ್ತಿರುವ ಮನೆಯ ಭಾಗಗಳ ಹೆಸರನ್ನು ಕೊಟ್ಟಿರುವ ಚೌಕಗಳಲ್ಲಿ ಬರೆ.



ಉತ್ತರಿಸು.

- ನಿನ್ನ ಮನೆಗೆ ಎಷ್ಟು ಬಾಗಿಲುಗಳಿವೆ?
- ನಿನ್ನ ಮನೆಯಲ್ಲಿ ಎಷ್ಟು ಕಿಟಕಿಗಳಿವೆ?
- ನಿನ್ನ ಮನೆಯಲ್ಲಿರುವ ವಿವಿಧ ಭಾಗಗಳನ್ನು ಹೆಸರಿಸು.

©KTBS Not to be republished

## ಚಿತ್ರ ಕಥೆ


ಅರುಣನು ಬೆಳಿಗ್ಗೆ ಎದ್ದು ಕೈ, ಕಾಲು, ಮುಖ ತೊಳೆಯಲು  ಕೋಣೆಗೆ ಹೋದನು. ನಂತರ ತಾಯಿ ಅವನನ್ನು  ಕರೆದರು. ತಾಯಿ ಅವನಿಗೆ ಕುಡಿಯಲು ಹಾಲು ನೀಡಿದರು. ಅಲ್ಲಿ ಅವನ ತಂದೆಯು ತಾಯಿಗೆ  ಸಹಾಯ ಮಾಡುತ್ತಿದ್ದರು. ಅರುಣನ ತಮ್ಮ  ಯಲ್ಲಿ ಟಿ.ವಿ. ನೋಡುತ್ತಿದ್ದನು.  ಯಲ್ಲಿ ಅವನ ಅಕ್ಕ ಓದುತ್ತಿದ್ದಳು. ಅಜ್ಜಿಯು  ಕೋಣೆಯಲ್ಲಿ ಮಲಗಿದ್ದರು.

©KTBS Not to be republished

**ಕೊಟ್ಟಿರುವ ಚೌಕದಲ್ಲಿ ಉತ್ತರ ಬರೆ.**

- ನೀನು ಮನೆಯ ಯಾವ ಭಾಗದಲ್ಲಿ ಓದುವೆ? ☐
- ನೀನು ಮನೆಯಲ್ಲಿ ಎಲ್ಲಿ ಮಲಗುವೆ? ☐
- ನೀನು ಮನೆಯ ಯಾವ ಕೋಣೆಯಲ್ಲಿ ಊಟ ಮಾಡುವೆ? ☐
- ನೀನು ಮನೆಯವರೊಂದಿಗೆ ಕುಳಿತು ಹರಟುವ ಜಾಗ ಯಾವುದು? ☐
- ನೀನು ಕೈ-ಕಾಲು, ಮುಖವನ್ನು ಎಲ್ಲಿ ತೊಳೆಯುವೆ? ☐

ಕೆಲವು ಮನೆಗಳಲ್ಲಿ ಕೋಣೆಗಳು ಪ್ರತ್ಯೇಕವಾಗಿ ಇರುತ್ತವೆ. ಇನ್ನು ಕೆಲವು ಮನೆಗಳಲ್ಲಿ ಒಂದು ದೊಡ್ಡ ಪಡಸಾಲೆ ಇರುತ್ತದೆ. ಅಲ್ಲಿನ ವಿವಿಧ ಭಾಗಗಳನ್ನು ವಿವಿಧ ಕೆಲಸಗಳಿಗೆ ಉಪಯೋಗಿಸುತ್ತಾರೆ.



©KTBS Not to be republished

ಇದು ಪೀಟರ್‌ನ ಮನೆ. ಅಗೋ ! ಬಾಗಿಲಲ್ಲಿ ಪೀಟರ್ ನಿಂತಿದ್ದಾನೆ.

ಪೀಟರ್‌ನ ಮನೆಯ ಮುಂದೆ, ಹಿಂದೆ, ಎಡ, ಬಲದಲ್ಲಿ ಏನಿವೆ? ಗುರುತಿಸಿ ಬರೆ.

- ಮನೆಯ ಮುಂದೆ ______________ ಇದೆ.
- ಮನೆಯ ಹಿಂದೆ ______________ ಇದೆ.
- ಮನೆಯ ಎಡಭಾಗದಲ್ಲಿ ______________ ಇದೆ.
- ಮನೆಯ ಬಲಭಾಗದಲ್ಲಿ ______________ ಇದೆ.

ನಿನ್ನ ಮನೆಯ ಸುತ್ತಲೂ ಗಮನಿಸು. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

- ನಿನ್ನ ಮನೆಯ ಮುಂದೆ ______________ ಇದೆ.
- ನಿನ್ನ ಮನೆಯ ಹಿಂದೆ ______________ ಇದೆ.
- ನಿನ್ನ ಮನೆಯ ಎಡಭಾಗದಲ್ಲಿ ______________ ಇದೆ.
- ನಿನ್ನ ಮನೆಯ ಬಲಭಾಗದಲ್ಲಿ ______________ ಇದೆ.

ರಮಾ ಮತ್ತು ರವಿಯ ಮನೆಯಲ್ಲಿ ಕಾಣುವ ಕಸವನ್ನು ಗುರುತಿಸು.

| | |
|---|---|
|  | ತರಕಾರಿ ಸಿಪ್ಪೆ, ಹಣ್ಣುಗಳ ಸಿಪ್ಪೆ, ಎಲೆಗಳು, ಸೊಪ್ಪಿನ ಕಸವನ್ನು ಒಂದು ಕಸದ ಡಬ್ಬಕ್ಕೆ ಹಾಕು. |
|  | ಒಣ ಕಸವಾದ ಪ್ಲಾಸ್ಟಿಕ್, ಪೇಪರ್, ಚಾಕಲೇಟ್ ಕವರ್, ಕಾಗದದ ಚೂರು, ದೊಡ್ಡ ಕಡ್ಡಿಗಳನ್ನು ಇನ್ನೊಂದು ಕಸದ ಡಬ್ಬಕ್ಕೆ ಹಾಕು. |

© KTBS Not to be republished

**ಉತ್ತರಿಸು.**

- ರಮಾ ತರಕಾರಿ ಕಸವನ್ನೆಲ್ಲಾ ಎತ್ತಿಕೊಂಡು ಎಲ್ಲಿ ಹಾಕುತ್ತಾಳೆ?
- ಪೇಪರ್, ಪ್ಲಾಸ್ಟಿಕ್‌ಗಳನ್ನು ರವಿ ಎಲ್ಲಿ ಹಾಕುತ್ತಿದ್ದಾನೆ?
- ನಿನ್ನ ಮನೆಯಲ್ಲಿ ಯಾವ ಯಾವ ಬಗೆಯ ಕಸ ಕಾಣುವೆ, ಹೇಳು?
- ನಿನ್ನ ಮನೆಯ ಕಸವನ್ನು ಏನು ಮಾಡುತ್ತಾರೆ?

| | |
|---|---|
|  | ಹಸಿಯಾಗಿರುವ ತರಕಾರಿ, ಹಣ್ಣಿನ ಸಿಪ್ಪೆ ಮುಂತಾದವುಗಳನ್ನು ಕಸದ ಡಬ್ಬದಲ್ಲಿ ಹಾಕು. ಗೊಬ್ಬರ ಮಾಡಿ ಕೈತೋಟಕ್ಕೆ ಹಾಕು. |
| ಮನೆಯನ್ನು ಸ್ವಚ್ಛವಾಗಿಡು, ಮನೆ ಕಸವನ್ನು ಬೀದಿಗೆ ಹಾಕಬೇಡ. |  |
|  | ಪ್ರತಿ ದಿನವೂ ಕಸವನ್ನು ಪೌರ ಕಾರ್ಮಿಕರ ಕಡೆ ಕೊಡು. |


©KTBS Not to be republished

ಇಲ್ಲೊಂದು ಮನೆಯ ಚಿತ್ರವಿದೆ. ನೀನು ಈ ಮನೆಯಲ್ಲಿ ವಾಸ ಮಾಡಬೇಕಾದರೆ, ಯಾವ ಯಾವ ಬದಲಾವಣೆ ಮಾಡಿಕೊಳ್ಳುವೆ? ಇಲ್ಲಿ ಬರೆ.



©KTBS Not to be republished

ಈ ಚಿತ್ರದಲ್ಲಿನ ಚುಕ್ಕೆಗಳನ್ನು ಸೇರಿಸು. ನಿನಗಿಷ್ಟವಾದ ಬಣ್ಣಗಳನ್ನು ತುಂಬು.



ಮಣ್ಣು, ಬೆಂಡು, ರಟ್ಟು ಇತ್ಯಾದಿಗಳಿಂದ ಮನೆಯ ಮಾದರಿಗಳನ್ನು ಮಾಡು. ಅಲ್ಲಿ ವಿವಿಧ ಕೋಣೆಗಳನ್ನು ತೋರಿಸು.

## ಹಾಡಿ ನಲಿ

ಮನೆ ಮನೆ ನನ್ನ ಮನೆ,
ಚಂದದ ಹೂಗಳು ಇರುವ ಮನೆ;
ತಂಪಿನ ಗಾಳಿಯು ಬರುವ ಮನೆ,
ಸ್ವಚ್ಛ ಸುಂದರ ನನ್ನ ಮನೆ.

©KTBS Not to be republished

ಪಾಠ – 8


# ಅಂಗ – ಆರೋಗ್ಯ

**ಈ ಪಾಠವನ್ನು ಕಲಿತ ನಂತರ ನೀನು,**

- ದೇಹದ ಅಂಗಗಳನ್ನು ಗುರುತಿಸುವೆ ಮತ್ತು ಅವುಗಳ ಕೆಲಸಗಳನ್ನು ತಿಳಿಯುವೆ.
- ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಸ್ವಚ್ಛತೆಯ ಆವಶ್ಯಕತೆಯನ್ನು ತಿಳಿಯುವೆ.

ಕನ್ನಡಿಯಲ್ಲಿ ನಿನ್ನನ್ನು ನೀನು ನೋಡಿಕೊ. ನಿನ್ನ ದೇಹದ ಯಾವ ಭಾಗಗಳನ್ನು ನೀನು ಗುರುತಿಸಬಲ್ಲೆ? ಅವುಗಳ ಹೆಸರನ್ನು ಹೇಳು.

**ಚಿತ್ರ ನೋಡು. ಗೆರೆ ಎಳೆದ ಭಾಗಗಳ ಹೆಸರನ್ನು ಅಲ್ಲಿ ಕೊಟ್ಟಿರುವ ಚೌಕದಲ್ಲಿ ಬರೆ.**



©KTBS Not to be republished

**ಆಟ ಆಡು.**

ಗೆಳೆಯರೊಡನೆ ಸೇರಿ ಎರಡು ಗುಂಪು ಮಾಡಿಕೊ. ಒಂದು ಗುಂಪಿನ ಒಬ್ಬರು ತಮ್ಮ ದೇಹದ ಒಂದು ಭಾಗವನ್ನು ತೋರಿಸಲಿ, ಇನ್ನೊಂದು ಗುಂಪಿನವರು ಆ ಭಾಗದ ಹೆಸರನ್ನು ಹೇಳಲಿ. ಹೀಗೆ ಆಟ ಮುಂದುವರೆಯಲಿ.

**ಇಲ್ಲಿ ಕೆಲವು ಚಿತ್ರಗಳನ್ನು ಕೊಟ್ಟಿದೆ. ಅವುಗಳ ಮುಂದೆ ದೇಹದ ಭಾಗಗಳ ಹೆಸರು ಇವೆ. ಚಿತ್ರದಲ್ಲಿನ ಕೆಲಸಗಳನ್ನು ಮಾಡಲು ದೇಹದ ಯಾವ ಭಾಗವನ್ನು ಉಪಯೋಗಿಸುತ್ತೀಯ ಎಂಬುದಕ್ಕೆ (✓) ಗುರುತು ಹಾಕು.**

| ಕೆಲಸ | ಬಾಯಿ | ಕಣ್ಣು | ಕಿವಿ | ಮೂಗು | ಕೈ | ಕಾಲು |
|---|---|---|---|---|---|---|
|  | | | | | | |
|  | | | | | | |
|  | | | | | | |
|  | | | | | | |

©KTBS Not to be republished

| ಕೆಲಸ | ಬಾಯಿ | ಕಣ್ಣು | ಕಿವಿ | ಮೂಗು | ಕೈ | ಕಾಲು |
|---|---|---|---|---|---|---|
|  | | | | | | |
|  | | | | | | |

**ನಾನು ಯಾರು ?**

ಈ ಒಗಟುಗಳನ್ನು ಶಿಕ್ಷಕರು ಅಥವಾ ಹಿರಿಯರ ನೆರವಿನಿಂದ ಬಿಡಿಸು. ಒಗಟಿನ ಉತ್ತರವನ್ನು ಖಾಲಿ ಚೌಕದಲ್ಲಿ ಬರೆ.

ಕಪ್ಪುಂಟು ಕಾಗೆಯಲ್ಲ
ಬಿಳುಪುಂಟು ಬೆಣ್ಣೆಯಲ್ಲ;
ನೀರುಂಟು ಬಾವಿಯಲ್ಲ
ಮುಚ್ಚಳವುಂಟು ಪಾತ್ರೆಯಲ್ಲ.

ನಾನು ಯಾರು? [ ]




**ಕಣ್ಣು ನಮಗೆ ನೋಡಲು ಸಹಾಯ ಮಾಡುತ್ತದೆ.**
**ಕಣ್ಣುಗಳಿಗೆ ಧೂಳು ಬೀಳದಂತೆ ಎಚ್ಚರ ವಹಿಸು.**
**ಕಣ್ಣಿಗೆ ಧೂಳು ಬಿದ್ದಾಗ, ಉಜ್ಜಬೇಡ ;**
**ಹಿರಿಯರಿಗೆ ತೋರಿಸು.**

©KTBS Not to be republished

ಹೊಳ್ಳೆಗಳೆರಡು ನನಗಿದೆಯಣ್ಣ
ವಾಸನೆ ತಿಳಿಯಲು ನಾ ಬೇಕಣ್ಣ
ಉಸಿರನು ಆಡಲು ನಾ ನೆರವಣ್ಣ.

ನಾನು ಯಾರು?



ಹೊರಗಡೆ ಓಡಾಡುವಾಗ ಧೂಳು ನಮ್ಮ ಮೂಗನ್ನು ಸೇರುತ್ತದೆ. ಹಾಗಾಗಿ ಅದನ್ನು ಪ್ರತಿದಿನ ಸ್ವಚ್ಛವಾಗಿಟ್ಟುಕೊ. ಮೂಗಿನಲ್ಲಿ ಕಡ್ಡಿ, ಬಳಪ, ಪೆನ್ಸಿಲ್‌ನಂತಹ ವಸ್ತುಗಳನ್ನು ಹಾಕಬೇಡ.

ಮಾತನು ಆಡಲು ನಾ ಬೇಕು
ಊಟವ ಮಾಡಲು ನಾ ಬೇಕು
ನಗಲು, ನಗಿಸಲು ನಾ ಬೇಕು.


ನಾನು ಯಾರು?



ಬೆಳಿಗ್ಗೆ ಎದ್ದ ತಕ್ಷಣ ಊಟದ ಮುನ್ನ, ಊಟದ ನಂತರ ಬಾಯನ್ನು ನೀರಿನಿಂದ ಸ್ವಚ್ಛಗೊಳಿಸು.

ಅಂಕು ಡೊಂಕು ಬಾವಿಯಲಿ
ನೀರು ಇಲ್ಲ ಬಲ್ಲೆಯ?
ಪಾಠ ಕೇಳು, ಹಾಡು ಹೇಳು
ಬೇಕು ನನ್ನ ಸಹಾಯ
ಕಡ್ಡಿ, ಬಳಪ ಹಾಕಿದರೆ
ತಪ್ಪಿದ್ದಲ್ಲ ಅಪಾಯ.

ನಾನು ಯಾರು?



ಕಿವಿಗೆ ಕಡ್ಡಿ, ಬಳಪ, ಪೆನ್ಸಿಲ್ ಮುಂತಾದ ಚೂಪಾದ ವಸ್ತುಗಳನ್ನು ಹಾಕಬೇಡ.

ಜೋರಾಗಿ ಶಬ್ದ ಮಾಡುವ ಪಟಾಕಿ ಹಚ್ಚುವಾಗ ಕಿವಿ ಮುಚ್ಚಿಕೊಳ್ಳುವೆ, ಏಕೆ? ಹೇಳು.

Not to be republished ©KTBS

ಬರೆಯಲು, ಹಿಡಿಯಲು
ತೋರಲು, ನೀಡಲು
ನಾನಲ್ಲದೆ ಬೇರಾರಿಲ್ಲ;
ಊಟದ ತುತ್ತನು
ಬಾಯಿಗೆ ಒಯ್ಯಲು
ನಾನಿಲ್ಲದೆ ಆಗಲ್ಲ
ನಾನು ಯಾರು? ☐



ಕೈಗಳಲ್ಲಿ ಬೆರಳುಗಳಿವೆ, ಅವುಗಳ ಆಕಾರವನ್ನು ಗಮನಿಸು. ಐದೂ ಬೆರಳುಗಳ ಹೆಸರನ್ನು ತಿಳಿ. ವಾರಕ್ಕೊಮ್ಮೆ ಉಗುರು ಕತ್ತರಿಸು. ಊಟಕ್ಕೆ ಮುನ್ನ ಮತ್ತು ನಂತರ ಕೈಯನ್ನು ಚೆನ್ನಾಗಿ ತೊಳೆದುಕೊ.


ಜಿಗಿಯುತ ಹಾರುತ, ಕುಣಿಯುತ ಓಡುತ
ಶಾಲೆಗೆ ಬರುವೆ ನನ್ನಿಂದ
ಕೆಲಸವ ಮಾಡುತ, ಆಟವ ಆಡುತ
ನಲಿಯುವೆ, ಕಲಿಯುವೆ ನನ್ನಿಂದ.
ನಾನು ಯಾರು? ☐



ಕಾಲುಗಳಲ್ಲೂ ಬೆರಳುಗಳಿವೆ. ಕೈ ಮತ್ತು ಕಾಲುಗಳ ಬೆರಳಿನ ಆಕಾರ ಬೇರೆ ಎಂಬುದನ್ನು ಗಮನಿಸು. ಒಂದೇ ಕಾಲಿನಿಂದ ನಡೆಯಲು ಸಾಧ್ಯವೆ? ಪ್ರಯತ್ನಿಸು.

©KTBS Not to be republished

## ಆಟ ಆಡು.




### ಹೀಗೆ ಆಡು.

- ದಾಳಗಳನ್ನು ಬಳಸಿಕೊಂಡು ಆಡು.
- ಕನಿಷ್ಠ ಇಬ್ಬರು ಆಟಗಾರರಿರಬೇಕು.
- ಏಣಿಯ ಮನೆಗೆ ಬಂದಾಗ ಮೇಲೆ ಸಾಗುವೆ, ಏಕೆ? ಯೋಚಿಸು.

©KTBS Not to be republished

- ಬಾಣದ ಕೊನೆಯ ತುದಿಯ ಮನೆಗೆ ಬಂದಾಗ ಕೆಳಗೆ ಬರುವೆ, ಏಕೆ? ಹೇಳು.
- 36ನೆಯ ಮನೆ ತಲುಪಿದವರು ಆಟ ಗೆಲ್ಲುವರು.


**ಶಾಲಿನಿ ಮತ್ತು ಪವನ ಎರಡನೆಯ ತರಗತಿಯಲ್ಲಿ ಓದುತ್ತಿರುವ ಮಕ್ಕಳು. ಅವರು ಮಾಡುವ ಕೆಲಸಗಳನ್ನು ಕೆಳಗಿನ ಚಿತ್ರಗಳಲ್ಲಿ ಕೊಟ್ಟಿದೆ. ಗಮನಿಸು.**

| | |
|---|---|
|  | ಬೇಗ ಎದ್ದು, ಹಲ್ಲು ಉಜ್ಜುವರು. |
| ಶೌಚಾಲಯಕ್ಕೆ ಹೋಗುವರು. |  |
|  | ಶೌಚಾಲಯ ಬಳಸಿದ ಮೇಲೆ ಸಾಬೂನಿನಿಂದ ಕೈ ತೊಳೆಯುವರು. |

©KTBS Not to be republished

| | |
|---|---|
|  | ಪ್ರತಿದಿನ ಸ್ನಾನ ಮಾಡುವರು. |
| ಒಗೆದ ಶುಭ್ರ ಬಟ್ಟೆ ಹಾಕಿಕೊಂಡು,<br>ತಲೆ ಬಾಚಿಕೊಳ್ಳುವರು. |  |
|  | ಊಟಕ್ಕೆ ಮೊದಲು ಮತ್ತು<br>ಊಟವಾದ ನಂತರ ಸಾಬೂನಿನಿಂದ<br>ಕೈ ತೊಳೆದುಕೊಳ್ಳುವರು. |
| ಶುದ್ಧವಾದ ನೀರು ಕುಡಿಯುವರು. |  |
|  | ವಾರಕ್ಕೊಮ್ಮೆ ಉಗುರು ಕತ್ತರಿಸುವರು. |


© KTBS
Not to be republished

| | |
|---|---|
|  | ಶಾಲೆಯಿಂದ ಮನೆಗೆ ಬಂದ ತಕ್ಷಣ ಕೈ, ಕಾಲು, ಮುಖ ತೊಳೆಯುವರು. |
| ಪ್ರತಿ ನಿತ್ಯ ಪಾಠಗಳನ್ನು ಓದುವರು. |  |
|  | ಚೆನ್ನಾಗಿ ಗಾಳಿ, ಬೆಳಕು ಬರುವ ಕೋಣೆಯಲ್ಲಿ ಮಲಗುವರು. ಮುಸುಕು ಹಾಕದೇ ಮಲಗುವರು. |

ಇವರು ಆರೋಗ್ಯವಂತ ಮಕ್ಕಳು. ನಿನಗೂ ಇಂತಹ ಅಭ್ಯಾಸಗಳು ಈಗಾಗಲೇ ಇರಬಹುದು. ಆರೋಗ್ಯವಂತರಾಗಿರಲು ಒಳ್ಳೆಯ ಅಭ್ಯಾಸಗಳು ಅವಶ್ಯ ಎನ್ನುವುದನ್ನು ತಿಳಿದುಕೊ.

©KTBS Not to be republished

ನಿನ್ನ ದಿನನಿತ್ಯದ ಅಭ್ಯಾಸಗಳನ್ನು ಈ ಕೆಳಗಿನ ವೃತ್ತದಲ್ಲಿ ಬರೆ.




©KTBS Not to be republished

ನಿನ್ನ ಅಭ್ಯಾಸಗಳಿಗೂ, ಶಾಲಿನಿ ಮತ್ತು ಪವನರ ಅಭ್ಯಾಸಗಳಿಗೂ ವ್ಯತ್ಯಾಸವಿದೆಯೇ? ನಿನಗೆ ಈ ಅಭ್ಯಾಸಗಳು ಇಲ್ಲವಾದಲ್ಲಿ, ಇವುಗಳನ್ನು ರೂಢಿಸಿಕೊ.

**ದೇಹದ ಸ್ವಚ್ಛತೆಯಿಂದ ಆರೋಗ್ಯ. ಆರೋಗ್ಯವೇ ಭಾಗ್ಯ.**

ಪಾಠ – 9

# ನನ್ನ ಸುರಕ್ಷತೆ

**ಈ ಪಾಠವನ್ನು ಕಲಿತ ನಂತರ ನೀನು,**





- ಸ್ಥಳೀಯ ಪರಿಸರದಲ್ಲಿ ವೈಯಕ್ತಿಕ ಸುರಕ್ಷತೆಯ ಅಭ್ಯಾಸಗಳನ್ನು ತಿಳಿಯುವೆ ಹಾಗೂ ಸುರಕ್ಷತೆಗೆ ಸರಳ ಕ್ರಮಗಳನ್ನು ಕೈಗೊಳ್ಳುವೆ.



**ಚಿತ್ರಗಳನ್ನು ನೋಡು. ಹುಡುಗಿಯ ಬೆರಳಿಗೆ ಗಾಯವಾಗಿದೆ ಏಕೆ? ಹೇಳು.**

©KTBS Not to be republished

ಮನೆಯಲ್ಲಿ ಸಾಮಾನ್ಯವಾಗಿ ಬಳಸುವ ವಸ್ತುಗಳ ಚಿತ್ರಗಳನ್ನು ಇಲ್ಲಿ ತೋರಿಸಿದೆ. ಇವುಗಳ ಹೆಸರುಗಳನ್ನು ಕೊಟ್ಟಿರುವ ಚೌಕದಲ್ಲಿ ಬರೆ. ಈ ವಸ್ತುಗಳನ್ನು ನೀನೆಂದಾದರೂ ಉಪಯೋಗಿಸಲು ಪ್ರಯತ್ನಿಸಿದ್ದೀಯಾ? ಏಕೆ? ತಿಳಿಸು.

| | |
|---|---|
|  |  |
|  |  |
|  |  |
|  |  |

©KTBS Not to be republished

## ಈ ಚಿತ್ರಗಳನ್ನು ವಿವರಿಸು.

ಚಿತ್ರಗಳಲ್ಲಿರುವ ಮಕ್ಕಳಿಗೆ ಏನಾದರೂ ತೊಂದರೆಗಳು ಉಂಟಾಗಿವೆಯೆ? ಏನು ತೊಂದರೆಯಾಗಿದೆ? ಏಕೆ? ಹೇಳು. ನೀನು ಎಂದಾದರೂ ಹೀಗೆ ಮಾಡಿಕೊಂಡಿದ್ದೀಯಾ? ಈ ವಸ್ತುಗಳಿಂದ ಅಪಾಯವಾಗದಂತೆ ಹೇಗೆ ಎಚ್ಚರವಹಿಸುವೆ? ಹೇಳು.

| | |
|---|---|
|  |  |
|  |  |
|  |  |
|  |  |

©KTBS Not to be republished





ಚಾಕು, ಕತ್ತರಿ, ಗರಗಸ ಮುಂತಾದ ವಸ್ತುಗಳನ್ನು ಹಿರಿಯರ ನೆರವಿಲ್ಲದೆ ಬಳಸಬಾರದು. ಅವರು ಹೇಳುವ ಎಚ್ಚರಿಕೆಗಳನ್ನು ಅನುಸರಿಸಿದರೆ ಅಪಾಯ ಆಗುವುದಿಲ್ಲ. ಹಿರಿಯರ ಸಹಾಯದಿಂದ ಇಂತಹ ವಸ್ತುಗಳನ್ನು ಎಚ್ಚರಿಕೆಯಿಂದ ಬಳಸುವುದನ್ನು ಕಲಿ.

- ಬಳೆ ಚೂರು, ಬ್ಲೇಡ್, ಗಾಜಿನ ವಸ್ತುಗಳನ್ನು ನಿನ್ನ ತರಗತಿಯಲ್ಲಿ ಅಥವಾ ಆಟದ ಮೈದಾನದಲ್ಲಿ ಬಿಸಾಡಬೇಡ.
- ಶಾಲೆಯಲ್ಲಿ ಚಾಕು, ಸ್ವಿಚ್ ಮುಂತಾದ ವಸ್ತುಗಳನ್ನು ಬಳಸುವಾಗ ಶಿಕ್ಷಕರ ಮಾರ್ಗದರ್ಶನ ಪಡೆ.
- ಆಟ ಆಡುವಾಗ ಮೈದಾನದಲ್ಲಿ ಚೂಪಾದ ವಸ್ತುಗಳು, ಗಾಜಿನ ಚೂರು, ಕಸ ಇರದಂತೆ ಎಚ್ಚರವಹಿಸು.
- ನಿನಗಿಂತ ಸಣ್ಣವರು ಶಾಲೆಯಲ್ಲಿರುತ್ತಾರೆ. ಅವರು ತೊಂದರೆಗೆ ಒಳಗಾಗದಂತೆ ಎಚ್ಚರವಹಿಸು.

ಮನೆಯಿಂದ ಹೊರಗೆ ಬಂದಾಗಲೂ ಕೂಡಾ ತೊಂದರೆಗಳು ಉಂಟಾಗಬಹುದು. ಎಚ್ಚರಿಕೆಯಿಂದ ಇರುವುದನ್ನು ಕಲಿ.

©KTBS Not to be republished

ಈ ಚಿತ್ರಗಳಲ್ಲಿ ಯಾವುದು ಸರಿ (✓), ಯಾವುದು ತಪ್ಪು (X) ಎಂದು ಕೊಟ್ಟಿರುವ ಚೌಕದಲ್ಲಿ ಗುರುತು ಹಾಕು. ಕಾರಣಗಳನ್ನು ಗೆಳೆಯರೊಂದಿಗೆ ಚರ್ಚಿಸು.

















©KTBS Not to be republished

## ಪಾಠ – 10

# ನಮ್ಮೆಲ್ಲರ ಆಸ್ತಿ


ಈ ಪಾಠವನ್ನು ಕಲಿತ ನಂತರ ನೀನು,

- ಸಾರ್ವಜನಿಕ ಆಸ್ತಿಯನ್ನು ಗುರುತಿಸುವೆ. ಅಗತ್ಯ ಪೂರೈಕೆಯ ಬಗ್ಗೆ ಹಿರಿಯರಿಂದ ಕೇಳಿ ತಿಳಿದುಕೊಳ್ಳುವೆ.


ಚಿತ್ರವನ್ನು ನೋಡು, ಸುಜಾತ ಎಲ್ಲಿ ನಿಂತಿದ್ದಾಳೆ ಗಮನಿಸು. ಇದು ಸುಜಾತಳ ಮನೆ. ಅವಳ ಶಾಲೆ ಬಹಳ ದೂರದಲ್ಲಿದೆ. ಸುಜಾತಳು ಪ್ರತಿದಿನ ಗೆಳತಿಯರ ಜೊತೆ ಶಾಲೆಗೆ ಹೋಗುತ್ತಾಳೆ.

**ಶಾಲೆಗೆ ಹೋಗುವಾಗ ದಾರಿಯಲ್ಲಿ ಸುಜಾತ ಯಾವ ಸ್ಥಳಗಳನ್ನು ಹಾದು ಹೋಗುತ್ತಾಳೆ? ಅವಳ ಜೊತೆ ಹೋಗಿ, ಪತ್ತೆ ಹಚ್ಚು. ಸುಜಾತ ಅವುಗಳ ಬಗ್ಗೆ ತಿಳಿಸುತ್ತಾಳೆ.**

**ಬಾಣದ ಗುರುತು ಹಾಕಿರುವ ಕಡೆಯಿಂದ ಆರಂಭಿಸು.**



©KTBS Not to be republished





ನನ್ನ ಮನೆಯಿಂದ ಶಾಲೆಗೆ ಹೋಗುವಾಗ ಮೊದಲಿಗೆ ಸಿಗುವುದೇ ಅಂಚೆ ಕಚೇರಿ. ಇಲ್ಲಿಂದ ಪತ್ರಗಳನ್ನು ಬೇರೆ ಊರಿನಲ್ಲಿರುವ ಗೆಳೆಯರಿಗೆ, ಬಂಧುಗಳಿಗೆ ಕಳುಹಿಸಬಹುದು.

ನಿನ್ನ ಊರಿನ ಅಂಚೆ ಕಚೇರಿಗೆ ಹೋಗಿ, ಅಲ್ಲಿನ ಕೆಲಸಗಳ ಬಗ್ಗೆ ತಿಳಿದುಕೊ.




ಇಗೊ! ಇದು ಬೀದಿ ದೀಪ. ರಾತ್ರಿಯ ವೇಳೆ ಜನರು ಓಡಾಡಲು ಬೆಳಕು ಬೇಕಲ್ಲವೆ? ಅದಕ್ಕಾಗಿ ಇವುಗಳನ್ನು ಅಲ್ಲಲ್ಲಿ ಹಾಕಿರುತ್ತಾರೆ.




ಇದು, ಬೀದಿಯಲ್ಲಿರುವ ನಲ್ಲಿ. ಇಲ್ಲಿ ಯಾರು ಬೇಕಾದರೂ ನೀರು ಹಿಡಿಯಬಹುದು. ನಲ್ಲಿಯನ್ನು ಹಾಳುಮಾಡಬೇಡ. ನೀರನ್ನು ಅನಗತ್ಯವಾಗಿ ಚೆಲ್ಲಬೇಡ.


©KTBS Not to be republished




ಬೇರೆ ಬೇರೆ ಊರುಗಳಿಗೆ ಹೋಗುವ ಬಸ್ಸುಗಳು ಒಂದು ಕಡೆ ಬಂದು ನಿಲ್ಲುವ ಸ್ಥಳವೇ ಬಸ್ ನಿಲ್ದಾಣ. ನಿಮ್ಮ ಊರಿನ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ಅಲ್ಲಿನ ಸ್ವಚ್ಛತೆ ಬಗ್ಗೆ ತಿಳಿ.




ಇದು ಶೌಚಾಲಯ. ಎಲ್ಲರ ಬಳಕೆಗಾಗಿ ಇದೆ. ಊರಿನಲ್ಲಿ ಅಲ್ಲಲ್ಲಿ ಇಂತಹ ಶೌಚಾಲಯಗಳನ್ನು ಕಟ್ಟಿಸಿರುತ್ತಾರೆ. ಇವು ಏಕೆ ಬೇಕು ಎನ್ನುವುದನ್ನು ತಿಳಿದುಕೊ. ಎಲ್ಲೆಂದರಲ್ಲಿ ಮಲಮೂತ್ರ ವಿಸರ್ಜಿಸಬೇಡ. ಶೌಚಾಲಯನ್ನು ಬಳಸುವುದನ್ನು ರೂಢಿಸಿಕೊ.




ಇದು ಊರಿನ ನ್ಯಾಯ ಬೆಲೆ ಅಂಗಡಿ. ಇಲ್ಲಿ ಕಡಿಮೆ ಬೆಲೆಗೆ ಅಕ್ಕಿ, ಗೋಧಿ, ಸಕ್ಕರೆ, ಎಣ್ಣೆ ಮುಂತಾದ ವಸ್ತುಗಳು ಸಿಗುತ್ತವೆ.

©KTBS Not to be republished




ಇದೊಂದು ಆಸ್ಪತ್ರೆ (ದವಾಖಾನೆ). ಜನರ ಆರೋಗ್ಯವನ್ನು ಕಾಪಾಡಲು ಆಸ್ಪತ್ರೆಗಳು ಬೇಕು. ನೀನು ಯಾವ ಸಂದರ್ಭದಲ್ಲಿ ಆಸ್ಪತ್ರೆಗೆ ಹೋಗಿರುವೆ? ಹೇಳು.



ಉದ್ಯಾನವನದಿಂದ ಹಾದು ಹೋದರೆ ಅಲ್ಲಿ ನನ್ನ ಶಾಲೆ. ಈ ಉದ್ಯಾನವನದಲ್ಲಿ ವಿಧ ವಿಧವಾದ ಗಿಡ, ಮರ, ಬಳ್ಳಿಗಳು ಇವೆ. ಹಕ್ಕಿಗಳು, ಚಿಟ್ಟೆಗಳು ಹಾರುತ್ತಿವೆ. ಕುಳಿತು ಆಡಲು ಜೋಕಾಲಿ ಇದೆ. ಇದು ಸುಂದರವಾದ ಉದ್ಯಾನವನ.




ಇದೇ ನನ್ನ ಶಾಲೆ. ಇದು ದೊಡ್ಡದಾಗಿದೆ. ಇಲ್ಲಿ ಎಂಟು ಕೋಣೆಗಳಿವೆ. ಶಾಲೆಯ ಮುಂದೆ ಆಟದ ಮೈದಾನವಿದೆ. ಇದನ್ನು ನಾನು ಮತ್ತು ನನ್ನ ಗೆಳೆಯರು ಸೇರಿ ಸ್ವಚ್ಛಮಾಡುತ್ತೇವೆ. ನನ್ನ ಶಾಲೆ ನನಗೆ ಬಹಳ ಇಷ್ಟ.

**ನಿನ್ನ ಶಾಲೆಯ ಬಗ್ಗೆ ಎರಡು ವಾಕ್ಯಗಳನ್ನು ಹೇಳು.**

© KTBS Not to be republished


ಸುಜಾತಳ ಮನೆಯಿಂದ ಶಾಲೆಗೆ ಹೋಗುವ ದಾರಿಯಲ್ಲಿ ನೀನು ಏನೇನು ನೋಡಿದೆ? ಕೆಳಗಿನ ಅಂಕಣದಲ್ಲಿ ಬರೆ.

| ಕ್ರ.ಸಂ. | ನೋಡಿದ ಜಾಗ | ಇವು ನಿನ್ನ ಊರಿನಲ್ಲಿ ಇದ್ದರೆ (✓) ಹಾಕು | ಇವು ನಿನ್ನ ಊರಿನಲ್ಲಿ ಇಲ್ಲದಿದ್ದರೆ (X) ಹಾಕು |
|---|---|---|---|
| 1. | | | |
| 2. | | | |
| 3. | | | |
| 4. | | | |
| 5. | | | |
| 6. | | | |
| 7. | | | |
| 8. | | | |
| 9. | | | |
| 10. | | | |

©KTBS Not to be republished

ಜನರಿಗೆ ಸಹಾಯ ಮಾಡಲು ಊರಿನಲ್ಲಿ ಶಾಲೆ, ಅಂಚೆ ಕಚೇರಿ, ಆಸ್ಪತ್ರೆ, ನ್ಯಾಯ ಬೆಲೆ ಅಂಗಡಿ, ಶೌಚಾಲಯ, ಬಸ್ ನಿಲ್ದಾಣ, ಬೀದಿದೀಪ, ಬೀದಿನಲ್ಲಿಗಳು ಇರುತ್ತವೆ. ಇವೆಲ್ಲವೂ ನಮ್ಮೆಲ್ಲರ ಅಗತ್ಯಗಳನ್ನು ಪೂರೈಸುತ್ತವೆ. ಇವು ನಮ್ಮೆಲ್ಲರ ಆಸ್ತಿ. ಹೀಗಾಗಿ ಇವು ಸಾರ್ವಜನಿಕ ಆಸ್ತಿ.

ನಿನ್ನ ಊರಿನಲ್ಲಿರುವ ಸಾರ್ವಜನಿಕ ಆಸ್ತಿಯನ್ನು ಈ ವೃತ್ತದಲ್ಲಿ ಬರೆ. ಪ್ರತಿಯೊಂದರ ಉಪಯೋಗವನ್ನು ನಿನ್ನ ಶಿಕ್ಷಕರು ಅಥವಾ ಹಿರಿಯರಿಂದ ಕೇಳಿ ತಿಳಿದುಕೊ.




©KTBS
Not to be republished

ಊರಿನಲ್ಲಿ ಎಲ್ಲರೂ ಉಪಯೋಗಿಸುವ ಸೌಲಭ್ಯಗಳೇ ಸಾರ್ವಜನಿಕ ಆಸ್ತಿ. ಈ ಸೌಲಭ್ಯಗಳ ಅಗತ್ಯ ನಮಗೆಲ್ಲರಿಗೂ ಇದೆ. ಸಾರ್ವಜನಿಕ ಆಸ್ತಿಯನ್ನು ಹಾನಿ ಮಾಡದೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಸಾರ್ವಜನಿಕ ನಲ್ಲಿಗಳು ಹಾಗೂ ಬೀದಿದೀಪಗಳಿಗೆ ಹಾನಿ ಮಾಡಬಾರದು. ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಉದ್ಯಾನವನಗಳಲ್ಲಿ ಕಸವನ್ನು ಹಾಕಬಾರದು.

ಒಂದು ವಾಕ್ಯದಲ್ಲಿ ಉತ್ತರಿಸು.

1) ಅಂಚೆ ಪತ್ರಗಳನ್ನು ನೀನು ಎಲ್ಲಿಂದ ಪಡೆಯುವೆ?

2) ನಿನ್ನೂರಿನ ಆಸ್ಪತ್ರೆಯಿಂದ ನಿನಗೇನು ಪ್ರಯೋಜನ?

3) ಊರಿನಲ್ಲಿ ಬಸ್‌ಗಳು ಬಂದು ನಿಲ್ಲುವ ಸ್ಥಳದ ಹೆಸರೇನು?

4) ನಿನ್ನ ಶಾಲೆ ಸುಂದರವಾಗಿ ಕಾಣಲು ನೀನೇನು ಮಾಡುವೆ?

5) ಬೀದಿಯಲ್ಲಿ ನಲ್ಲಿ ಏಕಿದೆ?

©KTBS Not to be republished

**ಸಾರ್ವಜನಿಕರ ಆಸ್ತಿ – ನಮ್ಮ ನಿಮ್ಮೆಲ್ಲರ ಆಸ್ತಿ**

## ಪಾಠ – 11

# ಪಯಣ

**ಈ ಪಾಠವನ್ನು ಕಲಿತ ನಂತರ ನೀನು,**

- ಸಾರಿಗೆ ಸಾಧನಗಳನ್ನು ವೇಗದ ಮತ್ತು ನಿಧಾನದ ವಾಹನಗಳೆಂದು ವರ್ಗೀಕರಿಸುವೆ.
- ಭೂ, ಜಲ ಮತ್ತು ವಾಯು ಸಾರಿಗೆಗಳನ್ನು ಗುರುತಿಸುವೆ.

➢ ನೀನು ಶಾಲೆಗೆ ಹೇಗೆ ಬರುವೆ?

➢ ನೀನು ಬೇರೆ ಊರಿಗೆ ಹೋಗಬೇಕಾದಾಗ ಹೇಗೆ ಹೋಗುವೆ?

**ಒಂದು ಕಡೆಯಿಂದ ಮತ್ತೊಂದು ಕಡೆಗೆ ಜನರನ್ನು ಮತ್ತು ಸಾಮಾನುಗಳನ್ನು ಸಾಗಿಸುವ ಸಾಧನಗಳೇ ವಾಹನಗಳು.**

**ನೀನು ನೋಡಿರುವ ವಾಹನಗಳ ಹೆಸರು ಬರೆ.**

1. ______________________
2. ______________________
3. ______________________
4. ______________________
5. ______________________
6. ______________________
7. ______________________
8. ______________________

©KTBS Not to be republished

ಚಿತ್ರದಲ್ಲಿರುವ ವಾಹನಗಳ ಹೆಸರನ್ನು ಕೊಟ್ಟಿರುವ ಚೌಕದಲ್ಲಿ ಬರೆ.























©KTBS
Not to be republished

ಕೆಳಗೆ ಹೆಸರಿಸಿರುವ ವಾಹನಗಳನ್ನು ನಿಧಾನವಾಗಿ ಹಾಗೂ ವೇಗವಾಗಿ ಚಲಿಸುವ ವಾಹನಗಳೆಂದು (✓) ನಿಂದ ಗುರುತಿಸು.

| ಕ್ರ.ಸಂ. | ವಾಹನಗಳ ಹೆಸರು | ನಿಧಾನವಾಗಿ ಚಲಿಸುತ್ತದೆ | ವೇಗವಾಗಿ ಚಲಿಸುತ್ತದೆ |
|---|---|---|---|
| 1. | ಸೈಕಲ್ | | |
| 2. | ಎತ್ತಿನ ಗಾಡಿ | | |
| 3. | ಬಸ್ಸು | | |
| 4. | ರೈಲು | | |
| 5. | ವಿಮಾನ | | |
| 6. | ಲಾರಿ | | |
| 7. | ಕುದುರೆ ಗಾಡಿ | | |
| 8. | ಮೋಟಾರ್ ಬೈಕ್ | | |
| 9. | ಆಟೋರಿಕ್ಷಾ | | |
| 10. | ದೋಣಿ | | |

©KTBS Not to be republished


ರಹೀಮನ ಊರು ಕಾರವಾರ. ಅವನ ಅಜ್ಜನ ಮನೆ ಇರುವುದು ಉಡುಪಿಯಲ್ಲಿ. ಈಗ ಅವನ ಅಜ್ಜನ ಮನೆಗೆ ಹೊರಟಿದ್ದಾನೆ. ಕೆಳಗಿನ ಯಾವ ವಾಹನದಲ್ಲಿ ಪ್ರಯಾಣ ಮಾಡಿದರೆ ರಹೀಮನು ತನ್ನ ಅಜ್ಜನ ಮನೆಗೆ ಬೇಗ ತಲುಪುತ್ತಾನೆ? ಆ ವಾಹನದ ಮುಂದೆ (✓) ಗುರುತು ಹಾಕು.

 ☐  ☐

---


 

ಹರಿಣಿಯು ಶಿವಮೊಗ್ಗದಿಂದ ತನ್ನ ಅಜ್ಜಿಯ ಮನೆ ಇರುವ ತುಮಕೂರಿಗೆ ಯಾವ ವಾಹನದಲ್ಲಿ ಹೋದರೆ ಉತ್ತಮ? ಆ ವಾಹನದ ಮುಂದೆ (✓) ಹಾಕು.

 ☐  ☐

©KTBS Not to be republished

ಕಲಬುರಗಿಯಲ್ಲಿ ರಮೇಶ ಮತ್ತು ಜಾನ್ ಅಕ್ಕಪಕ್ಕದ ಮನೆಯಲ್ಲಿದ್ದಾರೆ. ಅವರು ಒಂದೇ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ. ದಿನವೂ ರಮೇಶ ಸೈಕಲ್‌ನಲ್ಲಿ ಮತ್ತು ಜಾನ್ ಮೋಟಾರ್ ಬೈಕಿನಲ್ಲಿ ಒಂದೇ ಸಮಯಕ್ಕೆ ಮನೆಯಿಂದ ಕಚೇರಿಗೆ ಹೊರಡುತ್ತಾರೆ. ಇವರಲ್ಲಿ ಯಾರು ಕಚೇರಿಯನ್ನು ಬೇಗ ತಲುಪುತ್ತಾರೆ? ಕೊಟ್ಟಿರುವ ಚೌಕದಲ್ಲಿ (✓) ಗುರುತು ಹಾಕು.



**ಉತ್ತರಿಸು.**

- ನೆಲದ ಮೇಲೆ ಚಲಿಸುವ ಯಾವುದಾದರೂ 4 ವಾಹನಗಳ ಹೆಸರುಗಳನ್ನು ಬರೆ.

| | | | |
|---|---|---|---|
| | | | |

- ನೀರಿನ ಮೇಲೆ ಚಲಿಸುವ ವಾಹನಗಳನ್ನು ನೋಡಿರುವೆಯಾ? ಅವುಗಳ ಹೆಸರುಗಳನ್ನು ಬರೆ. ನೀನು ಅವುಗಳಲ್ಲಿ ಪ್ರಯಾಣಿಸಿದ್ದೀಯ? ಹೇಳು.

| | | | |
|---|---|---|---|
| | | | |

- ಗಾಳಿಯಲ್ಲಿ ಚಲಿಸುವ ವಾಹನಗಳ ಬಗ್ಗೆ ನಿನಗೆ ಗೊತ್ತೆ? ಒಂದು ವಾಹನದ ಹೆಸರು ಬರೆ. [ ]

©KTBS Not to be republished

**ಇಲ್ಲಿ ಕೆಲವು ವಾಹನಗಳ ಹೆಸರುಗಳನ್ನು ಕೊಟ್ಟಿದೆ. ಅವು ಎಲ್ಲಿ ಚಲಿಸುತ್ತವೆ ಎಂಬುದನ್ನು ಕೆಳಗಿನ ಪಟ್ಟಿಯಲ್ಲಿ ಬರೆ.**

ಲಾರಿ, ಬಸ್ಸು, ಸೈಕಲ್, ದೋಣಿ, ವಿಮಾನ, ಕಾರು, ಎತ್ತಿನ ಗಾಡಿ, ಹಡಗು, ಹೆಲಿಕಾಪ್ಟರ್, ಕುದುರೆಗಾಡಿ, ಮೋಟಾರ್ ಬೈಕ್, ತೆಪ್ಪ, ಸ್ಟೀಮರ್.


| ಕ್ರ.ಸಂ. | ನೆಲದ ಮೇಲೆ ಚಲಿಸುವ ವಾಹನದ ಹೆಸರು | ನೀರಿನ ಮೇಲೆ ಚಲಿಸುವ ವಾಹನದ ಹೆಸರು | ಗಾಳಿಯಲ್ಲಿ ಚಲಿಸುವ ವಾಹನದ ಹೆಸರು |
|---|---|---|---|
| 1. | | | |
| 2. | | | |
| 3. | | | |
| 4. | | | |
| 5. | | | |
| 6. | | | |

©KTBS Not to be republished

- ನೆಲದ ಮೇಲೆ ಚಲಿಸುವ ವಾಹನ ಸೌಕರ್ಯಕ್ಕೆ ಭೂಸಾರಿಗೆ ಎನ್ನುವರು.
- ನೀರಿನ ಮೇಲೆ ಚಲಿಸುವ ವಾಹನ ಸೌಕರ್ಯಕ್ಕೆ ಜಲಸಾರಿಗೆ ಎನ್ನುವರು.
- ಗಾಳಿಯಲ್ಲಿ ಚಲಿಸುವ ವಾಹನ ಸೌಕರ್ಯಕ್ಕೆ ವಾಯುಸಾರಿಗೆ ಎನ್ನುವರು.

## ಬಣ್ಣ ಹಾಕು.


ಕೆಳಗೆ ಕೊಟ್ಟ ಚುಕ್ಕೆಗಳನ್ನು ಸೇರಿಸಿ ಬಣ್ಣ ತುಂಬು. ಇವು ಯಾವ ವಾಹನಗಳೆಂಬುದನ್ನು ಗುರುತಿಸು.



©KTBS
Not to be republished

ಕೆಳಗಿನ ಚಿತ್ರಗಳಲ್ಲಿ ವಾಹನಗಳನ್ನು ಮತ್ತು ಅವುಗಳ ಉಪಯೋಗಗಳನ್ನು ಕೊಟ್ಟಿದೆ. ಇವುಗಳನ್ನು ಗೆರೆ ಎಳೆದು ಹೊಂದಿಸು.


















©KTBS Not to be republished

|  |  |  |
|---|---|---|

ಚಿತ್ರದಲ್ಲಿ ಕಂಡುಬರುವ ವಾಹನಗಳಲ್ಲಿ ಜನರನ್ನು ಸಾಗಿಸುವ ವಾಹನಕ್ಕೆ ○ ಗುರುತು ಹಾಕು. ಸಾಮಾನುಗಳನ್ನು ಸಾಗಿಸುವ ವಾಹನಕ್ಕೆ □ ಗುರುತು ಹಾಕು ಎರಡನ್ನೂ ಸಾಗಿಸುವ ವಾಹನಕ್ಕೆ △ ಗುರುತು ಹಾಕು.

**ಬೆಂಕಿ ಪೊಟ್ಟಣಗಳನ್ನು ಜೋಡಿಸಿ ರೈಲು ಮಾಡು. ಹಾಳೆಯಿಂದ ವಿಮಾನ ಮಾಡಿ, ಮನೆಯಲ್ಲಿ ಹಾರಿಸು.**

**ನಾನು ಯಾರು? ಒಗಟು ಬಿಡಿಸು.**

ಹಾರುವೆನು ಹಕ್ಕಿಯಲ್ಲ
ಹೊಳೆಯುವೆನು ತಾರೆಯಲ್ಲ
ಚಕ್ರವಿದೆ ಕಾರಲ್ಲ
ವೇಗವಿದೆ ಚಿರತೆಯಲ್ಲ
ನನ್ನ ಹೆಸರು ಹೇಳು.

ರಸ್ತೆಯಲ್ಲಿ ಚಲಿಸಲಾರೆ
ಬಾನಿನಲ್ಲಿ ತೇಲಲಾರೆ
ಮಿಂಚಿನಂತೆ ನನ್ನ ಓಟ
ಚುಕುಬುಕೆಂಬ ನನ್ನ ಆಟ
ನನ್ನ ಹೆಸರು ಹೇಳು.

ನೋಡಿರೆಲ್ಲ ನನ್ನ ಆಟ
ನೀರ ಮೇಲೆ ನನ್ನ ಓಟ
ಇಲ್ಲ ರೆಕ್ಕ ಪುಕ್ಕ ಮಾಟ
ನನಗೆ ಇಲ್ಲ ಯಾವ ಕಾಟ
ನನ್ನ ಹೆಸರು ಹೇಳು.

©KTBS Not to be republished

## ಪಾಠ – 12

# ನನ್ನ ಕುಟುಂಬ

**ಈ ಪಾಠವನ್ನು ಕಲಿತ ನಂತರ ನೀನು,**

- ಕುಟುಂಬಗಳಲ್ಲಿರುವ ವೈವಿಧ್ಯವನ್ನು ಗುರುತಿಸುವೆ.
- ಕುಟುಂಬವು ಒಂದು ಆಧಾರ ವ್ಯವಸ್ಥೆ ಎಂಬುದನ್ನು ಅರಿಯುವೆ.
- ನೀನು ಇತರರಂತೆ ಇರುವೆ, ಆದರೂ ಇತರರಿಗಿಂತ ಬೇರೆಯಾಗಿರುವೆ ಎಂಬುದನ್ನು ತಿಳಿಯುವೆ.

ಈ ಚಿತ್ರಗಳನ್ನು ನೋಡು. ಪ್ರತಿ ಕುಟುಂಬದಲ್ಲಿರುವ ಸದಸ್ಯರ ಸಂಖ್ಯೆಯನ್ನು ಎಣಿಸಿ ಬರೆ.


| ಕ್ರ.ಸಂ. | ಕುಟುಂಬ ಚಿತ್ರ | ಕುಟುಂಬದಲ್ಲಿರುವ ಜನರ ಸಂಖ್ಯೆ |
|---|---|---|
| ಕುಟುಂಬ 1 |  | |
| ಕುಟುಂಬ 2 |  | |
| ಕುಟುಂಬ 3 |  | |


©KTBS Not to be republished

| | | |
|---|---|---|
| ಕುಟುಂಬ<br>4 |  | |

- ಅತಿ ಕಡಿಮೆ ಸದಸ್ಯರಿರುವ ಕುಟುಂಬ ಯಾವುದು? ☐
- ಅತಿ ಹೆಚ್ಚು ಸದಸ್ಯರಿರುವ ಕುಟುಂಬ ಯಾವುದು? ☐
- ನಿನ್ನ ಮನೆಯಲ್ಲಿರುವ ಕುಟುಂಬದ ಸದಸ್ಯರ ಸಂಖ್ಯೆಯನ್ನು ಹೇಳು. ☐

**ಇಲ್ಲಿರುವ ಚಿತ್ರಗಳನ್ನು ಗಮನಿಸು. ಯಾವ ಚಿತ್ರದಲ್ಲಿ ಕಡಿಮೆ ಜನರಿದ್ದಾರೆ ಎಂಬುದನ್ನು (✓) ಗುರುತಿನಿಂದ ತೋರಿಸು.**





**ಬಿಟ್ಟ ಸ್ಥಳ ತುಂಬು.**




**ಅತಿ ಕಡಿಮೆ ಸದಸ್ಯರಿರುವ ಕುಟುಂಬವನ್ನು ಚಿಕ್ಕ ಕುಟುಂಬ ಎನ್ನುವರು.**
**ಹೆಚ್ಚು ಸದಸ್ಯರಿರುವ ಕುಟುಂಬವನ್ನು ದೊಡ್ಡ ಕುಟುಂಬ ಎನ್ನುವರು.**

©KTBS
Not to be republished

ವಿಮಲಳ ಕುಟುಂಬದಲ್ಲಿ ಆರು ಜನರಿದ್ದಾರೆ. ಅಜ್ಜಿ, ಅಜ್ಜ, ಅಮ್ಮ, ಅಪ್ಪ, ಅಣ್ಣ ಮತ್ತು ವಿಮಲ.



ವಿಮಲಳ ಕುಟುಂಬದ ಚಿತ್ರಗಳನ್ನು ಗಮನಿಸು. ಇಲ್ಲಿ ಏನು ನಡೆಯುತ್ತಿದೆ ಹೇಳು. ನಿನ್ನ ಮನೆಯಲ್ಲಿ ನಿನ್ನ ಕೆಲಸಗಳಿಗೆ ಯಾರು ಸಹಾಯ ಮಾಡುತ್ತಾರೆ? ಹೇಳು.

**ಕುಟುಂಬದ ಸದಸ್ಯರು ನಿನ್ನ ಆಟ ಪಾಠಗಳಲ್ಲಿ ಮತ್ತು ಇತರ ಕೆಲಸಗಳಲ್ಲಿ ನೆರವಾಗುತ್ತಾರೆ. ಕುಟುಂಬದ ಸದಸ್ಯರ ಅವಶ್ಯಕತೆ ಎಲ್ಲರಿಗೂ ಇದೆ.**

© KTBS Not to be republished

ಚಿತ್ರಗಳನ್ನು ಗಮನಿಸು.






© KTBS Not to be republished

ಉತ್ತರಿಸು.

- ವಿಮಲ ಏನು ಮಾಡುತ್ತಿದ್ದಾಳೆ?
- ಇವಳಿಗೆ ಯಾರು ಸಹಾಯ ಮಾಡುತ್ತಿದ್ದಾರೆ?
- ನಿನ್ನ ಕೆಲಸಗಳಿಗೆ ನೆರೆಹೊರೆಯವರು ಸಹಾಯ ಮಾಡುತ್ತಾರೆಯೆ?
- ನೀನು ನೆರೆಹೊರೆಯವರಿಗೆ ಸಹಾಯ ಮಾಡುತ್ತೀಯಾ?

**ನೆರೆಹೊರೆಯವರಿಗೆ ಸಹಾಯ ಮಾಡುವ ಅಭ್ಯಾಸಗಳನ್ನು ಬೆಳೆಸಿಕೊ.**



ಈ ಚಿತ್ರಗಳನ್ನು ಗಮನಿಸು. ಕೊಟ್ಟಿರುವ ವೃತ್ತದಲ್ಲಿ ಕೆಳಗೆ ಹೇಳಿದಂತೆ ಬಣ್ಣ ತುಂಬು.

- ದಪ್ಪವಾಗಿರುವ ವ್ಯಕ್ತಿ – ಕೆಂಪು ಬಣ್ಣ
- ಗುಂಗುರು ಕೂದಲಿನ ವ್ಯಕ್ತಿ – ಕಪ್ಪು ಬಣ್ಣ
- ತೆಳ್ಳಗಿರುವ ವ್ಯಕ್ತಿ – ನೀಲಿ ಬಣ್ಣ
- ಗಿಡ್ಡವಾಗಿರುವ ವ್ಯಕ್ತಿ – ಹಸಿರು ಬಣ್ಣ
- ಉದ್ದ ಕೂದಲಿನ ವ್ಯಕ್ತಿ – ಕೇಸರಿ ಬಣ್ಣ


©KTBS Not to be republished

## ನಿನ್ನ ಗೆಳೆಯ / ಗೆಳತಿಯರ ಲಕ್ಷಣಗಳನ್ನು ಪಟ್ಟಿಮಾಡು.

| ಗೆಳೆಯ/ ಗೆಳತಿಯ ಹೆಸರು | ಬಣ್ಣ | ಎತ್ತರ ಉದ್ದ–ಗಿಡ್ಡ | ದಪ್ಪ–ಸಣ್ಣ | ಕೂದಲು (ನೇರ, ಗುಂಗುರು) | ಕೂದಲು ಉದ್ದ–ಗಿಡ್ಡ |
|---|---|---|---|---|---|
| | | | | | |
| | | | | | |
| | | | | | |
| | | | | | |

©KTBS Not to be republished

ಈ ಪಟ್ಟಿಯಿಂದ ನಿನ್ನ ಹಾಗೂ ನಿನ್ನ ಗೆಳೆಯ / ಗೆಳತಿಯರ ಲಕ್ಷಣಗಳಿಗೆ ಇರುವ ವ್ಯತ್ಯಾಸಗಳನ್ನು ಗುರುತಿಸು. ಗೆಳೆಯ / ಗೆಳತಿಯರೊಂದಿಗೆ ಚರ್ಚಿಸು.



ಚಿತ್ರದಲ್ಲಿ ಜಾನಕಿ, ಫರೀದಾ, ಸಲೀಮ, ಜಾನ್, ರಮೇಶ ಎಲ್ಲರೂ ಲಗೋರಿ ಆಟವಾಡುತ್ತಿದ್ದಾರೆ.

ಎಲ್ಲರೂ ನೋಡಲು ಬೇರೆಯಾಗಿಯೆ ಕಾಣುತ್ತಾರೆ. ಇವರೆಲ್ಲರೂ ಸೇರಿ ಶಾಲೆಗೆ ಒಟ್ಟಾಗಿ ಬರುತ್ತಾರೆ. ಎಲ್ಲರೂ ಶಾಲೆಯ ಸಮವಸ್ತ್ರ ಧರಿಸುತ್ತಾರೆ. ಎಲ್ಲರೂ ಸೇರಿ ಓದುತ್ತಾರೆ. ಕೂಡಿ ನಲಿಯುತ್ತಾರೆ. ಎಲ್ಲರೂ ಪ್ರೀತಿ ಸ್ನೇಹದಿಂದ ಇರುತ್ತಾರೆ. ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ.

ನೀನೂ ನಿನ್ನ ಗೆಳೆಯರೂ ಬೇರೆ ಬೇರೆಯಾಗಿ ಕಾಣುತ್ತೀರಲ್ಲವೆ? ನೀನೂ ಗೆಳೆಯರೊಂದಿಗೆ ಕೂಡಿ ಆಟ ಪಾಠಗಳನ್ನು ಮಾಡುವೆಯಲ್ಲವೆ? ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ ಪ್ರೀತಿ ಪ್ರೇಮದಿಂದ ಇರುವಿರಲ್ಲವೆ?

## ಹಾಡಿ ನಲಿ

ನಾನು ಉದ್ದ, ನೀನು ಗಿಡ್ಡ,
ವಿವಿಧ ಮೈಯ ಬಣ್ಣ;
ಶಾಲೆಯಲ್ಲಿ ಕಲಿಯುತಿರುವ,
ನಾವಿಬ್ಬರು ಗೆಳೆಯರು.

ಕಪ್ಪು ಕಂದು ಕಣ್ಗಳು,
ಉದ್ದ ಗಿಡ್ಡ ಕೂದಲು;
ಮೂಗು, ಕಿವಿಗಳೆಲ್ಲವೂ,
ಸ್ವಲ್ಪ ಬೇರೆ ನೋಡಲು.

ನಾನು ಬೇರೆ ನೀನು ಬೇರೆ,
ನೋಡುವವರ ಕಣ್ಣಿಗೆ;
ಆದರೇನು ಸೇರಿ ನಾವು,
ನಲಿವೆವು ಜೊತೆ ಜೊತೆಗೆ.

©KTBS
Not to be republished

## ಪಾಠ – 13

# ಹಬ್ಬ ಬಂತು ಹಬ್ಬ

**ಈ ಪಾಠವನ್ನು ಕಲಿತ ನಂತರ ನೀನು**

- ಕುಟುಂಬದ ಮತ್ತು ಸಂಬಂಧಿಕರ ಕುಟುಂಬದ ಸಮಾರಂಭಗಳಲ್ಲಿ ಭಾಗವಹಿಸಿರುವ ಬಗ್ಗೆ ವರದಿ ಮಾಡುವೆ.

**ಈ ಚಿತ್ರಗಳನ್ನು ಗಮನಿಸು. ಇಲ್ಲಿ ನಡೆಯುತ್ತಿರುವ ಸಮಾರಂಭಗಳ ಹೆಸರನ್ನು ಕೊಟ್ಟಿರುವ ಚೌಕದಲ್ಲಿ ಬರೆ.**







© KTBS Not to be republished

## ರೀಟಾಳ ಹುಟ್ಟುಹಬ್ಬದ ಚಿತ್ರಗಳನ್ನು ನೋಡಿ, ಕತೆ ಹೇಳು.



©KTBS Not to be republished

**ಉತ್ತರಿಸು.**

- ನಿನ್ನ ಮನೆಯಲ್ಲಿ ಯಾವ ಸಮಾರಂಭಗಳು ನಡೆಯುತ್ತವೆ?
- ನಿನ್ನ ಮನೆಯಲ್ಲಿ ಆಚರಿಸುವ ಹಬ್ಬಗಳು ಯಾವುವು?
- ನಿಮ್ಮ ಮನೆಯಲ್ಲಾದ ಯಾವುದಾದರೂ ಒಂದು ಸಮಾರಂಭ ಅಥವಾ ಹಬ್ಬವನ್ನು ಎರಡು ವಾಕ್ಯಗಳಲ್ಲಿ ಹೇಳು.
- ನೀನು ನಿನ್ನ ಗೆಳೆಯರ ಮನೆಯಲ್ಲಿ ಅಥವಾ ಸಂಬಂಧಿಗಳ ಮನೆಯಲ್ಲಿ ನಡೆದ ಸಮಾರಂಭಗಳಿಗೆ ಹೋಗಿರುವೆಯಾ?
- ಅಂತಹ ಸಮಾರಂಭಗಳ ಹೆಸರು ಹೇಳು.

**ಕೆಳಗಿನ ಚಿತ್ರಗಳನ್ನು ಗಮನಿಸು. ಈ ಹಬ್ಬಗಳು ಯಾವುವು ಎಂದು ನಿನಗೆ ಗೊತ್ತೆ? ಕೊಟ್ಟಿರುವ ಚೌಕದಲ್ಲಿ ಅವುಗಳ ಹೆಸರು ಬರೆ.**







©KTBS Not to be republished

ದೀಪಗಳ ಹಬ್ಬವೇ ದೀಪಾವಳಿ. ಹಿಂದೂಗಳು ಈ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಮನೆಯವರೆಲ್ಲರೂ ಹೊಸಬಟ್ಟೆ ಧರಿಸುತ್ತಾರೆ. ಬಗೆಬಗೆಯ ಸಿಹಿ ತಿಂಡಿಗಳನ್ನು ಮಾಡಿ ತಿನ್ನುತ್ತಾರೆ. ಮನೆಗಳಲ್ಲಿ ದೀಪ ಹಚ್ಚಿ, ಪಟಾಕಿ ಸಿಡಿಸುತ್ತಾರೆ.





ರಂಜಾನ್ ತಿಂಗಳ ಕೊನೆಯಲ್ಲಿ ಆಚರಿಸುವ ಈದ್-ಉಲ್-ಫಿತರ್ ಮುಸ್ಲಿಂರ ಪ್ರಮುಖ ಹಬ್ಬ. ಈ ಹಬ್ಬವನ್ನು ಒಂದು ತಿಂಗಳ ಉಪವಾಸದ ನಂತರ ಆಚರಿಸುತ್ತಾರೆ. ಮನೆಯವರೆಲ್ಲ ಸಿಹಿ ಹಂಚಿ ಶುಭಕೋರುತ್ತಾರೆ.

ಯೇಸುಕ್ರಿಸ್ತನು ಹುಟ್ಟಿದ ಹಬ್ಬವೇ ಕ್ರಿಸ್‌ಮಸ್. ಕ್ರೈಸ್ತರು ಈ ಹಬ್ಬವನ್ನು ಡಿಸೆಂಬರ್ 25 ರಂದು ಸಂಭ್ರಮ ಸಡಗರದಿಂದ ಆಚರಿಸುತ್ತಾರೆ. ಹೊಸಬಟ್ಟೆ ತೊಟ್ಟು, ಕೇಕ್ ಹಂಚಿ ಎಲ್ಲರಿಗೂ ಶುಭಾಶಯವನ್ನು ಹೇಳುತ್ತಾರೆ.



©KTBS Not to be republished

ಚಿತ್ರಗಳನ್ನು ಗಮನಿಸು. ಈ ಸಮಾರಂಭಗಳಲ್ಲಿ ನೀನು ಭಾಗವಹಿಸಿದ್ದರೆ (✓) ಹಾಕು.







ಚಿತ್ರ ನೋಡಿ, ಹಬ್ಬಗಳ ಹೆಸರು ಬರೆ.













©KTBS
Not to be republished









ನಿನ್ನ ಶಾಲೆಯಲ್ಲಿ ಅಚರಿಸುವ ಹಬ್ಬ, ಸಮಾರಂಭಗಳ ಹೆಸರು ಹೇಳು. ಶಾಲಾ ಸಮಾರಂಭಗಳಲ್ಲಿ ನಿನ್ನ ಗೆಳೆಯ / ಗೆಳತಿಯರೊಂದಿಗೆ ಹೇಗೆ ಭಾಗವಹಿಸುವೆ ಹೇಳು. ನಿನಗಿಷ್ಟವಾದ ಒಂದು ಶಾಲಾ ಸಮಾರಂಭದ ವಿವರ ನೀಡು.




© KTBS Not to be republished

ಚಿತ್ರಗಳಿಗೆ ಬಣ್ಣ ತುಂಬು.





©KTBS
Not to be republished



ವಿವಿಧ ಬಗೆಯ ರಂಗೋಲಿಗಳನ್ನು ಹಾಕಲು ಕಲಿ. ಹಿರಿಯರು ರಂಗೋಲಿಗಳಿಗೆ ಬಣ್ಣ ತುಂಬಿಸುವುದನ್ನು ಗಮನಿಸು.

ನಿನ್ನ ಮನೆಯಲ್ಲಿ ಮಾಡುವ ಹಬ್ಬ ಅಥವಾ ಸಮಾರಂಭಗಳಿಗೆ ನಿನ್ನ ಕುಟುಂಬದ ಸದಸ್ಯರು ಮನೆಯನ್ನು ಹೇಗೆ ಅಲಂಕರಿಸುತ್ತಾರೆ ಎಂಬುದನ್ನು ಗಮನಿಸು, ನೀನೂ ಕಲಿ.

©KTBS Not to be republished

## ಪಾಠ – 14

# ಹಿರಿಯರ ಆರೈಕೆ

**ಈ ಪಾಠವನ್ನು ಕಲಿತ ನಂತರ ನೀನು,**

- ರೋಗಿಗಳಿಗೆ ಹಾಗೂ ವಯಸ್ಸಾದವರಿಗೆ ನೆರವು ನೀಡುವ ಮನೋಭಾವ ಬೆಳೆಸಿಕೊಳ್ಳುವೆ.




**ಉತ್ತರಿಸು.**

- ಅಜ್ಜಿ ಏಕೆ ಮಲಗಿದ್ದರು?
- ರಾಜು ಅಜ್ಜಿಗೆ ಹೇಗೆ ಸಹಾಯ ಮಾಡಿದ?
- ನಿನ್ನ ಅಪ್ಪ, ಅಮ್ಮ, ಅಜ್ಜ, ಅಜ್ಜಿಗೆ ನೀನು ಹೇಗೆ ನೆರವಾಗುವೆ?



©KTBS Not to be republished

ಈ ಚಿತ್ರಗಳನ್ನು ನೋಡು. ಮಕ್ಕಳು ಏನು ಮಾಡುತ್ತಿದ್ದಾರೆ? ಹೇಳು.






ಈ ಕೆಳಗಿನ ಚಿತ್ರಗಳನ್ನು ಗಮನಿಸು, ಸರಿ ಎನಿಸಿದ್ದಕ್ಕೆ (✓) ಗುರುತನ್ನು, ತಪ್ಪು ಎನಿಸಿದ್ದಕ್ಕೆ (X) ಗುರುತು ಹಾಕು.













©KTBS Not to be republished

ಚಿತ್ರಗಳನ್ನು ಗಮನಿಸು. ಈ ಸಂದರ್ಭದಲ್ಲಿ ನೀನು ಏನು ಮಾಡುವೆ ಹೇಳು.




## ಹಾಡಿ ನಲಿ

ಹಿರಿಯರ ಕೆಲಸದಿ ಸಹಕಾರ,
ರೋಗಿಗೆ ಬೇಕು ಉಪಚಾರ;
ಮಾಡಲು ನೀ ಕಲಿ ಉಪಕಾರ,
ಬೆಳಸಿಕೋ ನೀನು ಮಮಕಾರ.

ನಾವು ಹಿರಿಯನ್ನು ಗೌರವಿಸಬೇಕು. ವಯಸ್ಸಾದವರನ್ನೂ, ಕಾಯಿಲೆಯಾದವರನ್ನೂ ಪ್ರೀತಿಯಿಂದ ನೋಡಿಕೊಳ್ಳಬೇಕು.

© KTBS Not to be republished

## ಪಾಠ – 15

# ಸಹಾಯ – ಸಹಕಾರ

**ಈ ಪಾಠವನ್ನು ಕಲಿತ ನಂತರ ನೀನು,**
- ಮನೆಯಲ್ಲಿ ಯಾರು ಯಾರು, ಯಾವ ಯಾವ ಕೆಲಸಗಳನ್ನು ಮಾಡುತ್ತಾರೆ ಎಂಬುದನ್ನು ಗುರುತಿಸುವೆ.

ಇದು ರಾಮುವಿನ ಮನೆ. ಇಲ್ಲಿ ರಾಮುವಿನ ಅಪ್ಪ, ಅಮ್ಮ, ಅಜ್ಜಿ, ತಂಗಿ ಮತ್ತು ಅಣ್ಣ ವಾಸಿಸುತ್ತಾರೆ. ಇವರು ಮಾಡುತ್ತಿರುವ ಕೆಲಸಗಳನ್ನು ಗಮನಿಸು.



ಯಾರು, ಯಾವ ಕೆಲಸಗಳನ್ನು ಮಾಡುತ್ತಿದ್ದಾರೆ? ಕೊಟ್ಟಿರುವ ಜಾಗದಲ್ಲಿ ಬರೆ.

- ತೋಟಕ್ಕೆ ನೀರು ಹಾಕುವುದು ☐
- ಹೂ ಕೀಳುವುದು ☐
- ಜಡೆ ಹಾಕುವುದು ☐
- ಪುಸ್ತಕ ಜೋಡಿಸುವುದು ☐

©KTBS Not to be republished

**ಬೆಳಗ್ಗೆಯಿಂದ ರಾತ್ರಿಯವರೆಗೆ ನಿನ್ನ ಮನೆಯಲ್ಲಿ ನಡೆಯುವ ಕೆಲಸಗಳನ್ನು ನೆನಪಿಸಿಕೊ. ಪ್ರತಿಯೊಂದು ಕೆಲಸವನ್ನು ಕುಟುಂಬದ ಯಾವ ಸದಸ್ಯರು ಮಾಡಿದರು ಎಂಬುದನ್ನು ಹೇಳು.**

ಇದು ಮಮತಾಳ ಮನೆ. ಇಲ್ಲಿ ಅವಳ ಅಪ್ಪ, ಅಮ್ಮ ಹಾಗೂ ಅಣ್ಣ ವಾಸಿಸುತ್ತಾರೆ. ಮಮತಾಳ ಮನೆಯಲ್ಲಾಗುವ ಕೆಲಸಗಳನ್ನು ಈ ಚಿತ್ರಗಳಲ್ಲಿ ತೋರಿಸಿದೆ.





**ಉತ್ತರಿಸು.**

- ಮಮತಾಳ ಮನೆಯಲ್ಲಿ ಯಾವ ಕೆಲಸಗಳು ನಡೆಯುತ್ತಿವೆ? ಹೇಳು.
- ಈ ಕೆಲಸಗಳನ್ನು ಯಾರು ಮಾಡುತ್ತಿದ್ದಾರೆ?
- ಈ ಎಲ್ಲ ಕೆಲಸಗಳನ್ನು ಒಬ್ಬರೇ ಮಾಡಿದರೆ ಏನಾಗುತ್ತದೆ? ಯೋಚಿಸು.
- ನಿನ್ನ ಮನೆಯಲ್ಲಿ ಎಲ್ಲರೂ ಸೇರಿ ಮಾಡುವ ಕೆಲಸಗಳನ್ನು ಹೇಳು?
- ಎಲ್ಲರೂ ಸೇರಿ ಕೆಲಸ ಮಾಡುವುದರಿಂದ ಆಗುವ ಪ್ರಯೋಜನವನ್ನು ಹೇಳು.


©KTBS Not to be republished

ಮನೆಯಲ್ಲಿ ನೀನು ಮಾಡುವ ಕೆಲಸಗಳಿಗೆ (✓) ಗುರುತು ಹಾಕು.






















ನೀನು ಮನೆಯಲ್ಲಿ ಯಾವ ಕೆಲಸಗಳಿಗೆ ನೆರವಾಗುವೆ? ಹೇಳು.

©KTBS Not to be republished

ಕೆಳಗಿನ ಚಿತ್ರಗಳನ್ನು ಹೊಂದಿಸು.

















©KTBS Not to be republished

ಇವುಗಳನ್ನು ಅಭಿನಯಿಸಿ ತೋರಿಸು.

1) ಬಾವಿಯಿಂದ ನೀರು ಸೇದುವುದು
2) ಗಿಡಕ್ಕೆ ನೀರು ಹಾಕುವುದು
3) ಕಟ್ಟಿಗೆ ಒಡೆಯುವುದು
4) ಪಾತ್ರೆ ತೊಳೆಯುವುದು
5) ಬಟ್ಟೆ ಒಗೆಯುವುದು
6) ಕಸ ಗುಡಿಸುವುದು
7) ತರಕಾರಿ ಹೆಚ್ಚುವುದು
8) ಜಡೆ ಹೆಣೆಯುವುದು

©KTBS Not to be republished

## ಹಾಡಿ ನಲಿ

ನಮ್ಮ ಮನೆಯೇ ಮಂದಿರ,
ನೋಡಲೆಷ್ಟು ಸುಂದರ;
ಇಲ್ಲಿ ಕೂಡಿ ಕೆಲಸ ಮಾಡಿ,
ಬೆಳೆಸಿ ಹೂ ಹಂದರ;
ಉಳಿಸಿ ಸಮಯ, ಗಳಿಸಿ ಸುಖವ,
ದೊರಕಿತು ಪ್ರೇಮಾದರ.

ಪಾಠ – 16

# ಆಡಿ ನಲಿ

ಈ ಪಾಠವನ್ನು ಕಲಿತ ನಂತರ ನೀನು,

- ಶಾಲೆಯ ಒಳಗೆ ಮತ್ತು ಹೊರಗೆ ಆಡುವ ಆಟಗಳನ್ನು ಪಟ್ಟಿ ಮಾಡುವೆ.

**ಈ ಚಿತ್ರಗಳನ್ನು ಗಮನಿಸು. ನೀನು ಮನೆಯಲ್ಲಿ ಮತ್ತು ಶಾಲೆಯಲ್ಲಿ ಆಡುವ ಆಟಗಳಿಗೆ (✓) ಗುರುತು ಹಾಕು.**



©KTBS
Not to be republished



ಗೆಳೆಯರೊಡನೆ ಸೇರಿ, ಗುಂಪಿನಲ್ಲಿ ಯಾವ ಯಾವ ಆಟಗಳನ್ನು ಆಡುವೆ ಹೇಳು. ಯಾವುದಾದರೂ 5 ಆಟಗಳ ಹೆಸರನ್ನು ಇಲ್ಲಿ ಬರೆ.

______________________________

______________________________

______________________________

______________________________

______________________________

©KTBS Not to be republished

ಚಿತ್ರಗಳನ್ನು ಗಮನಿಸು. ಈ ಆಟಗಳನ್ನು ಎಲ್ಲಿ ಆಡುತ್ತಿದ್ದಾರೆ? ಕೆಳಗೆ ಸಂಬಂಧಿಸಿದ ಚೌಕದಲ್ಲಿ (✓) ಹಾಕು.

| | |
|---|---|
|  |  |
| ಒಳಗೆ ☐ ಹೊರಗೆ ☐ | ಒಳಗೆ ☐ ಹೊರಗೆ ☐ |
|  |  |
| ಒಳಗೆ ☐ ಹೊರಗೆ ☐ | ಒಳಗೆ ☐ ಹೊರಗೆ ☐ |

ಇಲ್ಲಿ ಪಟ್ಟಿ ಮಾಡಿದ ಆಟಗಳಲ್ಲಿ ಹೊರಗೆ ಅಥವಾ ಒಳಗೆ ಆಡುವ ಆಟಗಳಿಗೆ ಆಯಾ ಪಟ್ಟಿಯಲ್ಲಿ (✓) ಗುರುತು ಹಾಕು.

| ಆಟಗಳು | ಒಳಗೆ | ಹೊರಗೆ |
|---|---|---|
| ಪಗಡೆಯಾಟ | | |
| ಕೇರಂ | | |
| ಕುಂಟೆ ಬಿಲ್ಲೆ | | |


©KTBS Not to be republished

| | | |
|---|---|---|
| ಚೌಕಾಬಾರ | | |
| ಲಗೋರಿ | | |
| ಕ್ರಿಕೆಟ್ | | |
| ಹಾವು ಏಣಿಯಾಟ | | |
| ಜೂಟಾಟ | | |
| ಹಗ್ಗದ ಆಟ | | |
| ಬುಗರಿಯಾಟ | | |
| ವಾಲಿಬಾಲ್ | | |
| ಕಬಡ್ಡಿ | | |

| | |
|---|---|
| **ಶಾಲೆಯ ಅಥವಾ ಮನೆಯ ಒಳಗೆ ಆಡುವ ಆಟಗಳನ್ನು ಒಳಾಂಗಣ ಆಟಗಳು ಎನ್ನುವರು.** | **ಶಾಲೆಯ ಅಥವಾ ಮನೆಯ ಹೊರಗೆ ಆಡುವ ಆಟಗಳನ್ನು ಹೊರಾಂಗಣ ಆಟಗಳು ಎನ್ನುವರು.** |

©KTBS Not to be republished

ಈ ಆಟಗಳನ್ನು ಗಮನಿಸು. ಕೊಟ್ಟ ಚೌಕದಲ್ಲಿ ಒಳಾಂಗಣ ಆಟಕ್ಕೆ □ ಮತ್ತು ಹೊರಾಂಗಣ ಆಟಕ್ಕೆ △ ಗುರುತಿಸು.








© KTBS Not to be republished

ಈ ಆಟಗಳನ್ನು ಆಡಲು ಬಳಸುವ ಸಾಮಗ್ರಿಗಳನ್ನು ಕೊಟ್ಟಿರುವ ಜಾಗದಲ್ಲಿ ಬರೆ.

ಕ್ರಿಕೆಟ್ ________ ________ ________

ಲಗೋರಿ ________ ________ ________

ಚಿನ್ನಿದಾಂಡು ________ ________ ________

ವಾಲಿಬಾಲ್ ________ ________ ________

ಕಲ್ಲಾಟ ________ ________ ________

ಹಾವು-ಏಣಿ ________ ________ ________

ಚೌಕಾಬಾರ ________ ________ ________

ಗೋಲಿಯಾಟ ________ ________ ________

ಕಬಡ್ಡಿ ________ ________ ________


ಕಣ್ಣಮುಚ್ಚಾಲೆ ________ ________ ________


ಶಾಲೆಯ ಒಳಗೆ ಮತ್ತು ಶಾಲೆಯ ಹೊರಗೆ ಆಡುವ ಆಟಗಳ ಚಿತ್ರಗಳನ್ನು ಸಂಗ್ರಹಿಸಿ ಖಾಲಿ ಜಾಗದಲ್ಲಿ ಅಂಟಿಸು.

| ಶಾಲೆಯ ಒಳಗೆ | ಶಾಲೆಯ ಹೊರಗೆ |
|---|---|
| | |

©KTBS Not to be republished

ಚುಕ್ಕೆಗಳನ್ನು ಜೋಡಿಸು. ಚಿತ್ರಗಳಿಗೆ ಬಣ್ಣ ಹಚ್ಚು.





©KTBS Not to be republished

# ಹಾಡಿ ನಲಿ

ಆಟದ ಬಗೆಗಳು ನೂರಾರು,
ಒಳಗೆ ಹೊರಗೆ ಹಲವಾರು.

ಲಗೋರಿ, ಕ್ರಿಕೆಟ್ ಹೊರಾಂಗಣ,
ಆಡಲು ಬೇಕು ಮೈದಾನ.

ಕೇರಂ ಆಡಲು ಒಳಾಂಗಣ,
ಪಗಡೆಗೂ ಸಾಕು ಒಳಾಂಗಣ.

ಗರಗರ ತಿರುಗುವ ಬುಗುರಿಯ ಆಟ,
ಚಟಪಟ ಎಗರಿದೆ ಚಿನ್ನಿಯ ಮಾಟ.

ತಿರುಗುತ ಹಾರುವ ಚೆಂಡಿನ ನೋಟ,
ಬಗೆ ಬಗೆ ಬಣ್ಣದ ಗೋಲಿಯ ಓಟ.

ಗೆಳೆಯರ ಕೂಡಿ ಆಡುವೆನು,
ಆಡುತ ಹಾರುತ ನಲಿಯುವೆನು.

©KTBS Not to be republished

## ಪಾಠ – 17

# ನಮಗೆ ಇವೂ ಬೇಕು


**ಈ ಪಾಠವನ್ನು ಕಲಿತ ನಂತರ ನೀನು,**

- ನಿನ್ನ ಆವಶ್ಯಕತೆಗಳ ಬಗ್ಗೆ ಅರಿಯುವೆ.

**ಈ ಚಿತ್ರಗಳಿಂದ ನೀನೇನು ತಿಳಿಯುವೆ?**



ನಾನು ಕಲಿಯಲು
ಶಾಲೆಗೆ ಹೋಗುವೆ.






ತರಕಾರಿ ತರಲು
ಮಾರುಕಟ್ಟೆಗೆ
ಹೋಗುವೆ.







ಅಕ್ಕಿ, ಗೋಧಿ ಬೇಕು,
ನ್ಯಾಯಬೆಲೆ ಅಂಗಡಿಗೆ
ಹೋಗುವೆ.







ತುಂಬಾ ನೆಗಡಿ,
ಆಸ್ಪತ್ರೆಗೆ ಹೋಗಿ
ಔಷಧಿ ತರುವೆ.





©KTBS
Not to be republished





**ಶಾಲೆ, ಮಾರುಕಟ್ಟೆ, ಆಸ್ಪತ್ರೆ, ನ್ಯಾಯಬೆಲೆ ಅಂಗಡಿ, ಬಸ್ ನಿಲ್ದಾಣ, ಅಂಚೆಕಚೇರಿ, ಇವು ನಮ್ಮ ಅಗತ್ಯಗಳನ್ನು ಪೂರೈಸುತ್ತವೆ.**


**ಈ ಚಿತ್ರಗಳನ್ನು ನೋಡು. ಇವು ನಿನ್ನ ಊರಿನಲ್ಲಿದ್ದರೆ, ಚೌಕದಲ್ಲಿ (✓) ಗುರುತು ಹಾಕು.**














**ಇವು ನಿನಗೆ ಏಕೆ ಬೇಕು? ಹೇಳು.**

©KTBS Not to be republished

## ಹಾಡಿ ನಲಿ

ಆಟವ ಆಡಲು ಪಾಠವ ಕಲಿಯಲು,
ಪಾಠಶಾಲೆಯ ನೀ ಸೇರು;
ಅಜ್ಜ-ಅಜ್ಜಿಯ ಊರಿಗೆ ಹೋಗಲು,
ಪೋಂಪೋಂ ಬಸ್ಸನು ನೀ ಏರು.

ನೋಡಲು ವಿಧವಿಧ ತರಕಾರಿ, ಹಣ್ಣು,
ಮಾರುಕಟ್ಟೆಯಲಿ ಸಾಲದು ಕಣ್ಣು ;
ಅಂಗಡಿಯಲಿ ಸಿಗುವುದು ಬನ್ನು,
ಆಸ್ಪತ್ರೆಯು ಬೇಕು ಮಾಗಲು ಹುಣ್ಣು.

ಎಲ್ಲವು ನಮಗೆ, ಇವೆಲ್ಲವೂ ನಮಗೆ,
ಹಾಳು ಮಾಡಿದರೆ ಇಲ್ಲವು ನಮಗೆ;
ಎಲ್ಲ ಸೌಕರ್ಯಗಳು ನಮಗಾಗಿ,
ಕಾಪಾಡುವ ನಾವು ಚೆನ್ನಾಗಿ.

©KTBS Not to be republished

## ಗೆರೆ ಎಳೆದು ಹೊಂದಿಸು.























©KTBS Not to be republished

ಇವೆಲ್ಲವೂ ನಮಗೆ ಬೇಕು.




© KTBS Not to be republished


## ಪಾಠ – 18

# ಬಾನಂಗಳದಲ್ಲಿ

**ಈ ಪಾಠವನ್ನು ಕಲಿತ ನಂತರ ನೀನು,**

- ಸೂರ್ಯ, ಚಂದ್ರ, ನಕ್ಷತ್ರಗಳನ್ನು ವೀಕ್ಷಿಸಿ ಕಣ್ಣಿಗೆ ಕಾಣುವ ಇವುಗಳ ಲಕ್ಷಣಗಳನ್ನು ಗುರುತಿಸುವೆ.
- ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕುಗಳನ್ನು ಗುರುತಿಸುವೆ.

**ಈ ಚಿತ್ರ ಗಮನಿಸು. ಈಗ ಯಾವ ಹೊತ್ತು ಹೇಳು?** ______________________





**ಹಗಲಿನ ಹೊತ್ತು ಆಕಾಶದಲ್ಲಿ ನಿನಗೇನು ಕಾಣುತ್ತದೆ? ಇಲ್ಲಿ ಬರೆ.**

ಪುಟಾಣಿ, ನಾನೇ ಸೂರ್ಯ.
ನಾನು ಹಗಲು ಹೊತ್ತಿನಲ್ಲಿ
ಕಾಣಿಸುತ್ತೇನೆ. ನಿಮಗೆಲ್ಲ
ಬೆಳಕು ನೀಡುತ್ತೇನೆ.




© KTBS Not to be republished








©KTBS
Not to be republished




ನಾನು ಉದಯಿಸುವ ಮತ್ತು ಮರೆಯಾಗುವ ದಿಕ್ಕುಗಳು ಯಾವುದೆಂದು ನಿನಗೆ ಗೊತ್ತೆ? ಈ ಚಿತ್ರವನ್ನು ನೋಡು, ಪೂರ್ವ ದಿಕ್ಕಿನಲ್ಲಿ ನಾನು ಉದಯಿಸುತ್ತೇನೆ. ರೆಹನಾ ನನಗೆ ಎದುರಾಗಿ ನಿಂತು, ನಾನು ಉದಯಿಸುವುದನ್ನು ನೋಡುತ್ತಿದ್ದಾಳೆ.






©KTBS Not to be republished

ಈಗ ರೆಹನಾಳು ಪಶ್ಚಿಮ ದಿಕ್ಕಿಗೆ ಬೆನ್ನು ಮಾಡಿದ್ದಾಳೆ. ನಾನು ಮರೆಯಾಗುವ ದಿಕ್ಕು ಪಶ್ಚಿಮ.





ರೆಹನಾ ಈಗ ತನ್ನ ಎಡಗೈಯನ್ನು ಚಾಚಿ ಮರವನ್ನು ತೋರಿಸುತ್ತಿದ್ದಾಳೆ. ಮರ ಉತ್ತರ ದಿಕ್ಕಿನಲ್ಲಿದೆ.






©KTBS Not to be republished




ರೆಹನಾ ಈಗ ತನ್ನ ಬಲಗೈಯನ್ನು ಮನೆಯತ್ತ ಚಾಚಿದ್ದಾಳೆ. ಇದೇ ದಕ್ಷಿಣ ದಿಕ್ಕು. ರೆಹನಾಳ ಮನೆ ದಕ್ಷಿಣ ದಿಕ್ಕಿನಲ್ಲಿದೆ.





ಪುಟಾಣಿ, ನಾನು ಉದಯಿಸುವ ದಿಕ್ಕಿಗೆ ಎದುರಾಗಿ ನಿಂತು ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣ ದಿಕ್ಕುಗಳನ್ನು ಗುರುತಿಸು.

**ಪವನ್ ಚಿತ್ರದಲ್ಲಿ ಪೂರ್ವ ದಿಕ್ಕಿಗೆ ಎದುರಾಗಿ ನಿಂತಿದ್ದಾನೆ. ಚಿತ್ರ ವೀಕ್ಷಿಸು. ಮುಂದಿನ ಪುಟದಲ್ಲಿರುವ ವಾಕ್ಯಗಳನ್ನು ಪೂರ್ಣಗೊಳಿಸು.**



©KTBS Not to be republished


➢ ತೆಂಗಿನ ಮರ, ಪವನನ ____________ ದಿಕ್ಕಿನಲ್ಲಿದೆ.

➢ ನಾಯಿ ____________ ದಿಕ್ಕಿಗಿದೆ.

➢ ದಕ್ಷಿಣ ದಿಕ್ಕಿಗೆ ____________ ಇದೆ.

**ಆಡಿ ನಲಿ**

ಗೆಳೆಯರೊಂದಿಗೆ ಮೈದಾನಕ್ಕೆ ಬಾ. ಸೂರ್ಯನಿಗೆ ಎದುರಾಗಿ ನಿಂತುಕೊ. ಉಳಿದ ಮೂರು ದಿಕ್ಕುಗಳನ್ನು ಗುರುತಿಸುವ ಆಟ ಆಡು. ದಿಕ್ಕುಗಳನ್ನು ಸರಿಯಾಗಿ ಗುರುತಿಸಿದವರು ಗೆದ್ದಂತೆ.



**ಮೇಲಿನ ಚಿತ್ರ ನೋಡು. ಸಾಮಾನ್ಯವಾಗಿ ಹಗಲಿನ ವೇಳೆ ಮಾಡುವ ಕೆಲವು ಕೆಲಸಗಳಿವು. ಶಿಕ್ಷಕರು ಅಥವಾ ಹಿರಿಯರ ಸಹಾಯದಿಂದ ಇವು ಯಾವ ಕೆಲಸಗಳು ಎಂಬುದನ್ನು ಅಲ್ಲಿರುವ ಚೌಕಗಳಲ್ಲಿ ಬರೆ.**


ಹಗಲಿನ ವೇಳೆ ನೀನು ಮಾಡುವ ಕೆಲಸಗಳ ಬಗ್ಗೆ ನಿನ್ನ ಗೆಳೆಯರೊಂದಿಗೆ ಚರ್ಚಿಸು.

©KTBS Not to be republished

ಸೂರ್ಯನನ್ನು ಬರಿಗಣ್ಣಿನಿಂದ ನೇರವಾಗಿ ನೋಡಬೇಡ. ಸೂರ್ಯನನ್ನು ನೋಡಲು ಸಿದ್ಧಪಡಿಸಿದ ವಿಶೇಷ ಕನ್ನಡಕಗಳಿವೆ. ಇವುಗಳ ಮೂಲಕ ಶಿಕ್ಷಕರ ಅಥವಾ ಹಿರಿಯರ ನೆರವು ಪಡೆದು ನೋಡು.



ನಾನು ಮುಳುಗುವ ಸಮಯವಾಯಿತು, ಈಗ ಕತ್ತಲಾಗುತ್ತದೆ. ಪುಟಾಣಿ, ಈಗ ಆಕಾಶವನ್ನು ನೋಡು.



ನಿನಗೆ ರಾತ್ರಿಯಲ್ಲೇನು ಕಾಣುತ್ತಿದೆ? ಇಲ್ಲಿ ಬರೆ ____________, ____________




ನಾನು ಚಂದ್ರ, ರಾತ್ರಿಯ ಆಕಾಶದಲ್ಲಿ ನಾನು ಕಾಣುತ್ತೇನೆ. ಪ್ರತಿ ದಿನ ರಾತ್ರಿ ನನ್ನ ಆಕಾರವನ್ನು ನೋಡು, ನನ್ನ ಆಕಾರ ಬದಲಾಗುತ್ತಿರುತ್ತದೆ ಅಲ್ಲವೆ? ನಾನು ಪೂರ್ಣವಾಗಿ ಕಾಣುವ ದಿನವೇ **ಹುಣ್ಣಿಮೆ**. ನಾನು ಕಾಣದೇ ಇರುವ ದಿನವೇ **ಅಮಾವಾಸ್ಯೆ**.


©KTBS Not to be republished


## ಮಾಡಿ ನೋಡು

ಕೆಳಗೆ 15 ಚೌಕಗಳನ್ನು ನೀಡಿದೆ. ಹುಣ್ಣಿಮೆ ದಿನದಿಂದ ಆರಂಭಿಸಿ ಅಮಾವಾಸ್ಯೆಯವರೆಗೆ ಪ್ರತಿ ದಿನ ಆಕಾಶ ನೋಡು. ಚಂದ್ರನ ಆಕಾರವನ್ನು ಇಲ್ಲಿ ಬರೆ.

ಹುಣ್ಣಿಮೆ, ಅಮಾವಾಸ್ಯೆ ಎಷ್ಟು ದಿನಗಳಿಗೊಮ್ಮೆ ಬರುತ್ತದೆ? ತಿಳಿದುಕೊ.







©KTBS
Not to be republished

ಚುಕ್ಕಿ ಸೇರಿಸಿ ಬಣ್ಣ ತುಂಬು.



## ಹಾಡಿ ನಲಿ

ಸೂರ್ಯನು ಬಂದನು ಬಾನಿಂದ,
ಸೂಸಲು ಕಿರಣವು ಮೈಯಿಂದ;
ಹಕ್ಕಿಗಳು ಹೊರಟವು ಗೂಡಿಂದ,
ಕೆಲಸವು ಸಾಗಿತು ಭರದಿಂದ.

ಚಂದಮಾಮ ಬಾರೋ,
ಬೆಳದಿಂಗಳನು ತಾರೋ;
ಚುಕ್ಕಿಯ ಜತೆಗೆ ಸೇರೋ,
ಬೆಳಗಿನವರೆಗೂ ಆಡೋ.

ಮಿನುಗಲೆ ಮಿನುಗಲೆ ನಕ್ಷತ್ರ,
ಬಾರೆಲೆ ಬಾರೆಲೆ ನಮ್ ಹತ್ರ;
ಹೊಳೆಯುವ ನಿನ್ನ ಬೆಳಕಿನಲಿ,
ಆಡುವೆ ನಾನು ಜಿಗಿಯುತಲಿ.

©KTBS Not to be republished

ಪಾಠ – 19


# ಚಂದದೂರು ನನ್ನೂರು

ಈ ಪಾಠವನ್ನು ಕಲಿತ ನಂತರ ನೀನು,


- ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವೆ.
- ನಿನ್ನ ಹೋಬಳಿ ಮತ್ತು ತಾಲೂಕನ್ನು ಗುರುತಿಸುವೆ.

ಈ ಚಿತ್ರಗಳನ್ನು ಗಮನಿಸು. ಹಿಂದಿನ ತರಗತಿಯಲ್ಲಿ ಕಲಿತಿರುವುದನ್ನು ನೆನಪಿಸಿಕೊ. ಚಿತ್ರಗಳ ಹೆಸರನ್ನು ಅವುಗಳ ಕೆಳಗೆ ಕೊಟ್ಟಿರುವ ಚೌಕದಲ್ಲಿ ಬರೆ.










© KTBS Not to be republished





**ನಾನು ಯಾರು?**

ನಾನು ಅಗಲವಾಗಿ, ಆಳವಾಗಿ ಇದ್ದೇನೆ. ನನ್ನನ್ನು ಬಟ್ಟೆ ಒಗೆಯಲು, ವಾಹನ ತೊಳೆಯಲು, ದನಕರುಗಳ ಮೈ ತೊಳೆಯಲು, ಬೇಸಾಯಕ್ಕೆ ಮತ್ತು ನಾನಾ ಕೆಲಸಗಳಿಗೆ ಉಪಯೋಗಿಸುತ್ತಾರೆ. **ನಾನು ಯಾರು**?




ನಿನ್ನ ಊರಿನಲ್ಲಿ ಕೆರೆ ಇದ್ದರೆ ಹಿರಿಯರ ಜೊತೆ ಭೇಟಿ ಕೊಡು. ಅಲ್ಲಿ ನಡೆಯುವ ಚಟುವಟಿಕೆಗಳನ್ನು ಗಮನಿಸು.

ನಿನ್ನ ಊರಿನ ಕೆರೆಯ ನೀರು ಸ್ವಚ್ಛವಾಗಿದೆಯೇ ಎಂದು ಗಮನಿಸು. ಈ ನೀರನ್ನು ಸ್ವಚ್ಛವಾಗಿಡಲು ಏನು ಮಾಡುವೆ? ಹೇಳು.

©KTBS Not to be republished

ನನ್ನ ಬಣ್ಣ ಹಸಿರು. ಅನೇಕ ರೀತಿಯ ಮರ ಗಿಡಗಳು, ಪ್ರಾಣಿ-ಪಕ್ಷಿಗಳು ನನ್ನಲ್ಲಿವೆ. ತಂಪಾದ ಗಾಳಿಯನ್ನು ನಾನು ಕೊಡುತ್ತೇನೆ.

**ನಾನು ಯಾರು**? 



ನಿನ್ನ ಊರಿನ ಸಮೀಪ ಕಾಡು ಇದ್ದರೆ ಅಲ್ಲಿರುವ ಪ್ರಾಣಿ-ಪಕ್ಷಿಗಳ ಬಗ್ಗೆ ಹಿರಿಯರಿಂದ ಕೇಳಿ ತಿಳಿದುಕೊ. ಕಾಡಿನ ಮರಗಿಡಗಳನ್ನು ಕಡಿದರೆ ಏನಾಗುತ್ತದೆ? ಗೆಳೆಯರೊಂದಿಗೆ ಚರ್ಚಿಸು.

ಎಲ್ಲೆಲ್ಲೂ ನೀರಿನ ರಾಶಿ. ಆದರೆ ಉಪ್ಪು ನೀರು ನನ್ನದು. ನನ್ನ ತೀರದಲ್ಲಿ ಮರಳಿನ ರಾಶಿಯೇ ಇದೆ. ಹಡಗುಗಳು ನನ್ನ ಮೇಲೆ ಚಲಿಸುತ್ತವೆ. ಮೀನುಗಾರರು ಮೀನು ಹಿಡಿಯುತ್ತಾರೆ.


**ನಾನು ಯಾರು**? 



ನಿನ್ನ ಊರಿನ ಸಮೀಪ ಸಮುದ್ರ ತೀರವಿದ್ದರೆ ಹಿರಿಯರ ಜೊತೆಗೆ ಹೋಗಿ ಅಲ್ಲಿಯ ಚಟುವಟಿಕೆಗಳನ್ನು ಗಮನಿಸು.

ನಾನು ಎತ್ತರವಾಗಿರುವೆ. ಕೆಲವೊಮ್ಮೆ ಕಲ್ಲುಬಂಡೆಗಳೂ ನನ್ನಲ್ಲಿರುತ್ತವೆ. ನನ್ನ ಮೇಲೆ ಮರಗಿಡಗಳು ಬೆಳೆಯುತ್ತವೆ.

**ನಾನು ಯಾರು**? 




©KTBS Not to be republished


ನಿನ್ನ ಊರಿನ ಬಳಿ ಬೆಟ್ಟ ಗುಡ್ಡಗಳಿದ್ದರೆ ಹಿರಿಯರು ಹಾಗೂ ಗೆಳೆಯರೊಡನೆ ಹೊರ ಸಂಚಾರಕ್ಕೆ ಅಲ್ಲಿಗೆ ಹೋಗು. ಅವುಗಳ ಆಕಾರವನ್ನು ಗಮನಿಸು. ಅಲ್ಲಿ ಕಾಣುವ ವಸ್ತುಗಳ ಪಟ್ಟಿ ಮಾಡು.

ಜುಳು ಜುಳು ಎಂದು ನಾನು ಹರಿಯುವೆ. ಕುಡಿಯಲು ಮತ್ತು ಇತರ ಕೆಲಸಗಳಿಗೆ ನಾನು ಬೇಕು. ಹಲವು ಸಸ್ಯಗಳು ನನ್ನಲ್ಲಿ ಬೆಳೆಯುತ್ತವೆ. ಹಲವಾರು ಪ್ರಾಣಿಗಳೂ ನನ್ನಲ್ಲಿ ವಾಸವಾಗಿವೆ.

**ನಾನು ಯಾರು**? ☐



**ಚುಕ್ಕೆ ಸೇರಿಸಿ ಬಣ್ಣ ತುಂಬು.**



©KTBS Not to be republished

## ಆಟ ಆಡು.

ಈ ಅಕ್ಷರ ಬಂಧದಲ್ಲಿ ನಿನ್ನ ಸುತ್ತ ಮುತ್ತಲೂ ಕಂಡುಬರುವ ವಸ್ತುಗಳು ಇವೆ. ಅವುಗಳನ್ನು ಗುರುತಿಸಿ ವೃತ್ತ ಹಾಕು. ಆನಂತರ ಪಟ್ಟಿಯಲ್ಲಿ ಬರೆ. ಒಂದು ಮಾದರಿಯನ್ನು ಇಲ್ಲಿ ಕೊಟ್ಟಿದೆ.

| | | | | | | | |
|---|---|---|---|---|---|---|---|
| ದ್ರ | ಸ | ಪ | ಷ | ಗ | ಓ | ಪ | ಮಾ |
| ಅ | ಆ | ಯ | ಈ | ಮೋ | ಡ | ಯ | ಬೈ |
| ಣ | ಖ | ನ | ವ | ದಿ | ಔ | ಲ | ಶ |
| ಕ | ರ | ದಿ | ಬ | ಕ್ಕ | ಗ | ದ್ದೆ | ಬೆ |
| ಬ | ದ | ಉ | ಮ | ತ | ಕಾ | ಹ | ಟ್ಟ |
| ನ | ಲ | ಡ | ರ | ಳ | ಡು | ಮು | ಗು |
| ಮ | ಹೊ | ಐ | ಗಿ | ಖಿ | ಮ | ನೋ | ಡ್ಡ |
| ನ | ಲ | ಚ | ಡ | ರೆ | ಕೆ | ಜೇ | ಮಾ |
| ಸ | ಮು | ದ್ರ | ಋ | ಆ | ಆ | ಗಾ | ಲ |

ಮಾದರಿ : ಸಮುದ್ರ

1. ________________
2. ________________
3. ________________
4. ________________
5. ________________

©KTBS Not to be republished

## ಹಾಡಿ ನಲಿ

ಬನ್ನಿರಣ್ಣ ಬನ್ನಿರಕ್ಕ,
ಊರು ನೋಡ ಬರುವೆವು;
ಸುತ್ತ ಮುತ್ತ ಇರುವುದನ್ನು,
ನೋಡಿ ಕೇಳಿ ತಿಳಿವೆವು.


ಬೆಟ್ಟ ಗುಡ್ಡ ಕಾಡು ಮೇಡು,
ನಮ್ಮ ಸುತ್ತ ಇರುವವು;
ಮರ ಗಿಡ ಪ್ರಾಣಿ ಪಕ್ಷಿ,
ಅದರಲಿವೆ ಬಲ್ಲೆವು.

ಕೆರೆ ಕುಂಟೆ ನದಿಗಳು,
ನಮ್ಮ ಸುತ್ತ ಇರುವವು;
ಸಮುದ್ರವೆ ಹಿರಿಯಣ್ಣ,
ತಿಳಿಯಬೇಕು ಎಲ್ಲರು.

**ನಿನ್ನ ಊರಿನ ಸುತ್ತ ಬೆಟ್ಟ ಗುಡ್ಡಗಳು, ಕೆರೆ ನದಿಗಳು ಇವೆಯೇ? ಇದ್ದರೆ ಅವು ಎಲ್ಲಿವೆ ಎನ್ನುವುದರ ಬಗ್ಗೆ ನಿನ್ನ ಗೆಳೆಯ/ಗೆಳತಿಯರ ಜೊತೆಗೆ ಮಾತನಾಡು. ಅವುಗಳ ಬಗ್ಗೆ ತಿಳಿದುಕೊ.**

©KTBS Not to be republished

ಕೆಳಗಿನ ಚಿತ್ರ ಗಮನಿಸು. ಸಿಂಚನಾ ತನ್ನ ಊರಿನ ಪರಿಚಯ ಮಾಡಿಕೊಡುತ್ತಿದ್ದಾಳೆ.




**ಉತ್ತರಿಸು**

- ನಿನ್ನ ಊರಿನ ಹೆಸರನ್ನು ಇಲ್ಲಿ ಬರೆ ☐
- ನಿನ್ನ ಊರು ಯಾವ ಹೋಬಳಿಗೆ ಸೇರಿದೆ ಎಂಬುದನ್ನು ಶಿಕ್ಷಕರ ಸಹಾಯದಿಂದ ತಿಳಿದು, ಇಲ್ಲಿ ಬರೆ. ☐
- ನಿನ್ನ ಊರು ಯಾವ ತಾಲ್ಲೂಕಿಗೆ ಸೇರಿದೆ ಎಂಬುದನ್ನು ಶಿಕ್ಷಕರಿಂದ ಅಥವಾ ಹಿರಿಯರಿಂದ ತಿಳಿದು, ಇಲ್ಲಿ ಬರೆ. ☐

## ಹಾಡಿ ನಲಿ

ಊರು ಊರು ನನ್ನ ಊರು
ಯಾವ ಊರು ನಿನ್ನ ಊರು ?
ನನ್ನ ಊರು ____________

ಹೋಬಳಿ ಹೋಬಳಿ ನನ್ನ ಹೋಬಳಿ
ಯಾವ ಹೋಬಳಿ ನಿನ್ನ ಹೋಬಳಿ ?
ನನ್ನ ಹೋಬಳಿ ____________

ಇದೇ ಮಾದರಿಯಲ್ಲಿ ತಾಲ್ಲೂಕು ಮತ್ತು ಜಿಲ್ಲೆಗಳಿಗೂ ಹಾಡನ್ನು ರಚಿಸಿ, ಗೆಳೆಯರೊಂದಿಗೆ ರಾಗವಾಗಿ ಹೇಳು.

©KTBS Not to be republished